ಶ್ರೀ
ಶ್ರೀಮತೇ ರಾಮಾನುಜಾಯನಮಃ

ವಿಶಿಷ್ಟಾದ್ವೈತ ಸಿದ್ಧಾನ್ತ ರೀತ್ಯಾ

# ಪರಮಾತ್ಮನಿಗೂ ಚಿದಚಿತ್ತುಗಳಿಗೂ
ಇರುವ
# ಶರೀರಿ-ಶರೀರ ಸಂಬಂಧ

ಶ್ರೀಮಾನ್ ಎಂ. ಓ ಎಸ್ ಐಯ್ಯಂಗಾರ್, ಬಿ ಇ ,ಎಂ ಐ ಇ ,
ರಿಟೈರ್ಡ್ ರೈಲ್ವೇ ಡೆಪ್ಯೂಟಿ ಛೀಫ್ ಇಂಜಿನಿಯರಿಂದ
ಬರೆಯಲ್ಪಟ್ಟಿದ್ದು

ಉಭಯವೇದಾನ್ತ ಪ್ರವರ್ತನ ಸಭೆಯವರಿಂದ
ಪ್ರಕಟಿಸಲ್ಪಟ್ಟಿದ್ದು.

ಮಲ್ಲೇಶ್ವರಂ ಬೆಂಗಳೂರು.

1968

# ಪರಮಾತ್ಮನಿಗೂ ಚಿದಚಿತ್ತುಗಳಿಗೂ ಇರುವ ಶರೀರಿ-ಶರೀರ ಸಂಬಂಧವು

---

ಯೋನಿತ್ಯಮಚ್ಯುತ ಪದಾಂಬುಜಯುಗ್ಮರುಕ್ಮ ।
ವ್ಯಾಮೋಹತಸ್ತದಿ ತರಾಣಿತೃಣಾಯಮೇನೇ ॥
ಅಸ್ಮದ್ಗುರೋರ್ಭಗವತೋಽಸ್ಯದಯೈಕಸಿಂಧೋಃ ।
ರಾಮಾನುಜಸ್ಯ ಚರಣೌ ಶರಣಂ ಪ್ರಪದ್ಯೇ ॥

ಪರಮಾತ್ಮನಿಗೂ ಚಿದಚಿತ್ತುಗಳಿಗೂ ಇರುವ ಶರೀರಿ ಶರೀರ ಸಂಬಂಧವು ವಿಶಿಷ್ಟಾದ್ವೈತ ಸಿದ್ಧಾಂತದ ಒಂದು ಬಹು ಮುಖ್ಯವಾದ ಅಂಶವು ಇದು ಶಾಸ್ತ್ರಗಳ ಆಧಾರದಿಂದಲೇ ಸ್ಥಾಪಿತವಾಗಿರುವುದು ಇಲ್ಲಿ 'ಚಿತ್' ಎಂದರೆ ಜೀವಾತ್ಮರು 'ಅಚಿತ್' ಎಂದರೆ ಪ್ರಕೃತಿ ಶರೀರಿ ಎಂದರೆ ಶರೀರದೊಳಗೆ ನೆಲೆಸಿರುವ ಆತ್ಮಕ್ಕೆ ಹೆಸರು ವೇದದ ಪ್ರಾಮಾಣ್ಯವನ್ನು ಅಂಗೀಕರಿಸಿರುವ ಮತಸ್ಥರಲ್ಲಿಯೇ ಒಬ್ಬರಿಗೊಬ್ಬರಿಗೆ ಇರುವ ಭೇದವು ಆ ವೇದದಲ್ಲಿರುವ ಪ್ರಮಾಣಗಳನ್ನು ಸಂಪೂರ್ಣವಾಗಿ ಶೋಧಿಸಿ ಸಾಮಂಜಸ್ಯವನ್ನು ಸರಿಯಾಗಿ ಮಾಡದೆ ಇರುವುದರಲ್ಲಿಯೇ ಇರುವಂತೆ ಕಾಣುವುದು

## ಭೇಧಾಭೇದ ಶ್ರುತಿಗಳು ಮತ್ತು ಘಟಕ ಶ್ರುತಿಗಳು :

ಪರಬ್ರಹ್ಮಕ್ಕೂ ಚರಾಚರ ರೂಪವಾದ ಜಗತ್ತಿಗೂ ಇರುವ ಸಂಬಂಧದ ವಿಷಯವಾಗಿ ಹೇಳಲ್ಪಟ್ಟಿರುವ ಶ್ರುತಿವಾಕ್ಯಗಳನ್ನು ಹಿರಿಯರು ಮೂರು ವಿಧವಾಗಿ ವಿಂಗಡಿಸಿರುವರು. (1) ಭೇದಶ್ರುತಿ ವಾಕ್ಯಗಳು—ಎಂದರೆ ಜಗತ್ಕಾರಣವಾದ ಬ್ರಹ್ಮವೂ ಮತ್ತು ಅದರ ಕಾರ್ಯವಾದ ಜಗತ್ತೂ ಬೇರೆಬೇರೆ ; ಒಂದೇ ಅಲ್ಲ (2) ಅಭೇದ್ಯ ಶ್ರುತಿವಾಕ್ಯಗಳು—ಎಂದರೆ ಪರಬ್ರಹ್ಮವೂ ಜಗತ್ತೂ ಬೇರೆಬೇರೆಯಲ್ಲ ; ಅವೆರಡೂ ಒಂದೇ ಎಂದರೆ ಕಾರ್ಯ ಕಾರಣಗಳೆರಡೂ ಒಂದೇ ಮತ್ತು (3) ಘಟಕ ಶ್ರುತಿವಾಕ ಗಳು—ಎಂದರೆ ಪರಬ್ರಹ್ಮಕ್ಕೂ ಜಗತ್ತಿಗೂ ಇರುವ ಶರೀರಿ ಶರೀರ ಸಂಬಂಧವು. ಈ ಘಟಕ ಶ್ರುತಿ ವಾಕ್ಯಗಳು ಮೇಲೆ ಹೇಳಿದ ಭೇದಾ ಭೇದ ಶ್ರುತಿ ವಾಕ್ಯಗಳಿಗೆ ಆಪಾತತಃ (at first reading) ತೋರಿಬರುವ ವಿರೋಧಗಳನ್ನು ಪರಿಹರಿಸಿ ಅವುಗಳಿಗಿರುವ ಪರಸ್ಪರ ಸಾಮಂಜಸ್ಯವನ್ನು ಭೋಧಿಸುವ ವಾಕ್ಯಗಳು.

ಈ ಮೇಲಿನ ವಿಷಯವನ್ನು ನೋಡಿದರೆ ಪರಬ್ರಹ್ಮನಿಗೂ ಜಗತ್ತಿಗೂ ಇರುವ ಸಂಬಂಧದ ವಿಷಯದಲ್ಲಿ ಭೇದ ಮತ್ತು ಅಭೇದ ರೂಪವಾಗಿ ಪರಸ್ಪರ ವಿರುದ್ಧಗಳಾಗಿ ಕಂಡುಬರುವ ಕೆಲವು ಶ್ರುತಿವಾಕ್ಯಗಳಿರುವುವೆಂದೂ, ಈ ವಿರೋಧಗಳು ಆಪಾತತಃ (at first reading) ತೋರಿಬರುವವುಗಳೆಂದೂ, ಘಟಕ ಶ್ರುತಿ ವಾಕ್ಯಗಳು ಈ ವಿರೋಧಗಳನ್ನು ಪರಿಹರಿಸಿ ಮೇಲಿನವಾಕ್ಯಗಳಿಗೆ ಸಾಮಂಜಸ್ಯವನ್ನು ನಿರೂಪಿಸುವು ವೆಂದೂ ಹೇಳಿದಹಾಗಾಗುವುದು. ಇದಕ್ಕೆ ಒಂದು ಉದಾಹರಣೆಯನ್ನು ನೋಡೋಣ. "ತತ್ತ್ವಮಸಿ" (ಛಾಂ. 6–7–8) ಎಂದರೆ 'ನೀನು ಅವನೇ ಆಗಿರುವಿ' ಎಂಬ ಶ್ರುತಿ ವಾಕ್ಯದಲ್ಲಿ ಪರಬ್ರಹ್ಮವೇ ನೀನು ಎಂದು ಜೀವಬ್ರಹ್ಮರುಗಳಿಗೆ ಅಭೇದವನ್ನು ಸೂಚಿಸು ವಂತೆ ತೋರುವುದು. "ಪ್ರಥಗಾತ್ಮಾನಾಂ ಪ್ರೇರಿತಾರಂಚಮತ್ವಾ" (ಶ್ವೇ ಉ. 1–6) ಎಂದರೆ ಜೀವಾತ್ಮನನ್ನೂ ಪರಮಾತ್ಮನನ್ನೂ ಬೇರೆಬೇರೆ ಯಾದವರೆಂದು ತಿಳಿ–ಎಂಬ ಶ್ರುತಿವಾಕ್ಯವು ಜೀವರೂ ಪರಮಾತ್ಮನೂ ಬೇರೆಬೇರೆ ಎಂದು ಅವರಿಬ್ಬರಲ್ಲಿರುವ ಪರಸ್ಪರ ಭೇದವನ್ನು ಸೂಚಿಸುವುದು. "ಯಆತ್ಮನಿತಿಷ್ಠನ್ನಾತ್ಮನ ಮನ್ತರೋಯ ಮಾತ್ಮಾನವೇದ–ಯಸ್ಯಾತ್ಮಾ ಶರೀರಂ ....." (ಬೃಉ. 5–7–22) ಎಂದರೆ ಯಾವನು ಆತ್ಮನೊಳಗೆ ಅಂತರ್ಯಾಮಿಯಾಗಿ ಸ್ಥಿತನಾಗಿದ್ದು ಆ ಆತ್ಮನನ್ನು ನಿಯಮಿಸು ತ್ತಿರುವನೋ, ಯಾವನನ್ನು ಆತ್ಮನು ಅರಿಯಲಾರನೋ, ಯಾವನಿಗೆ ಆತ್ಮವು ಶರೀರವೋ, ಅವನೇ ಅಮೃತ ಸ್ವರೂಪನಾದ ಪರಮಾತ್ಮನು ; ಎಂಬುವುದೊಂದು ಘಟಕ ಶ್ರುತಿವಾಕ್ಯವು. ಈ ವಾಕ್ಯವು ಮೇಲೆ ಹೇಳಿದ ಭೇದಾಭೇದ ಶ್ರುತಿವಾಕ್ಯ ಗಳನ್ನು ಹೇಗೆ ಸಮನ್ವಯ ಮಾಡುವುದೆಂಬುದನ್ನು ನೋಡೋಣ. ಈ ಶ್ರುತಿವಾಕ್ಯ ದಿಂದ ಪರಮಾತ್ಮನು ಜೀವಾತ್ಮನಲ್ಲಿ ಅಂತರ್ಯಾಮಿಯಾಗಿದ್ದು ಆ ಜೀವಾತ್ಮನನ್ನು ತನ್ನ ಶರೀರವನ್ನಾಗಿ ಹೊಂದಿರುವನು ಎಂದು ಹೇಳುವುದರಿಂದ ಶರೀರ ವಾಚಕಗಳಾದ ಶಬ್ದಗಳು ತದಂತರ್ಯಾಮಿಯಾದ ಆತ್ಮನನ್ನೂ ನಿರ್ದೇಶಿಸುತ್ತವೆ ಮತ್ತು ಆ ಆತ್ಮವೂ ಆ ಶರೀರ ವಾಚಕ ಶಬ್ದದಿಂದ ಕರೆಯಲ್ಪಡುತ್ತದೆ ಎಂಬ ವ್ಯವಹಾರ ವಿರುವುದರಿಂದ ಇವೆರಡಕ್ಕೂ ವ್ಯವಹಾರದಲ್ಲಿ ಅಭೇದವನ್ನು ಸೂಚಿಸಿದಂತಾಗುವುದು. 'ದೇವದತ್ತ' ನೆಂಬ ನಾಮವು ಒಬ್ಬ ಮನುಷ್ಯನ ಹೆಸರಾದರೆ ಆ ಶರೀರ ಮತ್ತು ದೇವದತ್ತನ ಆತ್ಮ ಇವೆರಡೂ ಬೇರೆ ಬೇರೆ ಪದಾರ್ಥಗಳಾಗಿದ್ದರೂ ವ್ಯವಹಾರದಲ್ಲಿ ಆ ಬೇಧವನ್ನು ಕಳೆದುಕೊಂಡು ಒಂದೇ ಹೆಸರಿನಿಂದ ನಿರ್ದೇಶಿಸಲ್ಪಡುವುವು. ಅದರಂತೆಯೇ ಆ ದೇವದತ್ತನ ಆತ್ಮನಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವ ಪರಮಾತ್ಮನೂ ಅದೇ ಹೆಸರಿನಿಂದ ನಿರ್ದೇಶಿಸಲ್ಪಡುವನು. ಬೇರೆ ಬೇರೆ ಈ ಮೂರು ವಸ್ತುಗಳಿಗೂ 'ದೇವದತ್ತ' ನೆಂಬ ಒಂದೇ ನಾಮವು ಇಲ್ಲಿ ಅನ್ವಯಿಸುವುದು. ಘಟಕ ಶ್ರುತಿವಾಕ್ಯ ಗಳು ಈ ವಿಧವಾಗಿ ಭೇದಾಭೇದ ಸಮನ್ವಯವನ್ನು ಮಾಡುವುವು, ಪರಬ್ರಹ್ಮಕ್ಕೂ

ಜಗತ್ತಿಗೂ ಇರುವ ಪರಸ್ಪರ ಸಂಬಂಧದ ವಿಷಯವಾಗಿ ಈ ಮೂರು ವಿಧವಾದ ವಾಕ್ಯಗಳೂ ಶ್ರುತಿಗಳಲ್ಲಿ ಅನೇಕವಾಗಿರುವುವು

**ಶರೀರ ಶರೀರಿ ವಿಷಯಕವಾದ ಶಾಸ್ತ್ರ ಪ್ರಮಾಣಗಳು**

ವೇದಾನ್ತ ಪ್ರತಿಪಾದ್ಯವಾಗಿರುವ ಪರಬ್ರಹ್ಮಕ್ಕೂ ಚಿದಚಿತ್ತುಗಳಿಗೂ ಇರುವ ಈ ವಿಧವಾದ ಶರೀರಿ ಶರೀರ ಸಂಬಂಧವನ್ನು ಪರಿಗ್ರಹಿಸುವುದರಿಂದ ಆ ಪಾತತಃ ವಿರುದ್ಧಗಳಾಗಿ ತೋರಿಬರುವ ವೇದಾನ್ತ ವಾಕ್ಯಗಳೆಲ್ಲವೂ ಸಮಂಜಸಗಳಾಗಿ ಪರ ಬ್ರಹ್ಮದ ಸತ್ಯವಾದ ಸ್ಥಿತಿಯು ಕರತಲಾಮಲಕದಂತೆ ಗೋಚರಿಸುವುದು ಈ ವಿಷಯ ದಲ್ಲಿ ಭಗವದ್ರಾಮಾನುಜಾಚಾರ್ಯರು ಸಕಲ ಲೋಕೋಜ್ಜೀವನಾರ್ಥವಾಗಿ ಅನುಗ್ರಹಿಸಿರುವ ಅರ್ಥ ವಿಶೇಷವು ಸಂಗ್ರಹವಾಗಿ ಇಲ್ಲಿ ವಿಮರ್ಶಿಸಲ್ಪಡುವುದು

ಅಚಿತ್ತಾದ ಪ್ರಕೃತಿ ಮತ್ತು ಅದರ ಪರಿಣಾಮಗಳು ಪರಮಾತ್ಮನ ಶರೀರಗಳು ಎಂಬ ವಿಷಯದಲ್ಲಿ ಕೆಲವು ಶ್ರುತಿ ವಾಕ್ಯಗಳು ಇಲ್ಲಿ ವಿಮರ್ಶಿಸಲ್ಪಡುವುವು

ಯಃ ಪೃಥಿವ್ಯಾಂತಿಷ್ಠನ್ ಪೃಥಿವ್ಯಾ ಅನ್ತರೋಯಂ ಪೃಥಿವೀ ನವೇದಯಸ್ಯ ಪೃಥಿವೀ ಶರೀರಂ ಯಃ ಪೃಥಿವೀ ಮನ್ತರೋಯ ಮಯತ್ಯೇಷತ ಆತ್ಮಾನ್ತರ್ಯಾಮ್ಯ ಮೃತಃ' –(ಬ್ರು ಉ 5–7–3) ಎಂದರೆ ಯಾವನು ಪೃಥಿವಿಯಲ್ಲಿದ್ದುಕೊಂಡು ಅದರ ಒಳಗೆ ಪ್ರವೇಶಿಸಿದವನಾಗಿಯೂ ಅದರಿಂದ (ಎಂದರೆ ಆ ಪೃಥಿವಿಯಿಂದ)ಅರಿಯಲ್ಪಡದವನಾಗಿಯೂ, ಅದನ್ನು ಶರೀರವಾಗಿ ಉಳ್ಳವನಾಗಿಯೂ, ಅದರ ಪ್ರವೃತ್ತಿ ನಿವೃತ್ತಿರೂಪವಾದ ಕಾರ್ಯಗಳನ್ನು ನಿಯಮಿಸುತ್ತಾನೋ ಅವನೇ ನಿನಗೆ ಅಂತರ್ಯಾಮಿಯಾಗಿರುವನು , ಆ ಪೃಥ್ವೀಗತಗಳಾದ ದೋಷಗಳು ಅವನನ್ನು ಸ್ಪರ್ಶಿಸುವುದಿಲ್ಲ— ಎಂದು . ಪಂಚಭೂತಗಳಲ್ಲಿ ಒಂದಾಗಿ ಅಚಿತ್ತಾದ ಪೃಥಿವಿಯು ಪರಮಾತ್ಮನ ಶರೀರವೆಂದು ಹೇಳಿರುವುದು ಹೀಗೆಯೇ ಆ ಶ್ಲೋಕದ ಮುಂದೆ "ಯೋಽಪ್ಸುತಿಷ್ಠನ್' –(ಬೃ ಉ 5–7–4) "ಯೋಽಗ್ನೌತಿಷ್ಠನ್ " "ಯೋಽನ್ತರಿಕ್ಷೇತಿಷ್ಠನ್ ' "ಯೋವಾಯೌತಿಷ್ಠನ್ " "ಯೋದಿವಿತಿಷ್ಠನ " "ಯೋಆದಿತ್ಯೇತಿಷ್ಠನ್ " 'ಯೋದಿಕ್ಷುತಿಷ್ಠನ್ " "ಯಶ್ಚಂದ್ರತಾರಕೇತಿಷ್ಠನ್ " "ಯಆಕಾಶೇತಿಷ್ಠನ್ " "ಯಸ್ತಮಸಿತಿಷ್ಠನ್ "ಯಸ್ತೇಜಸಿತಿಷ್ಠನ್ ' "ಯಸ್ಸರ್ವೇಷುಭೂತೇಷು ತಿಷ್ಠನ್ ' "ಯಃಪ್ರಾಣೇತಿಷ್ಠನ್ " "ಯೋವಾಚಿತಿಷ್ಠನ್ " 'ಯಶ್ಚಕ್ಷುಷಿ ತಿಷ್ಠನ್ " "ಯಃಶ್ರೋತ್ರೇತಿಷ್ಠನ್ " "ಯೋಮನಸಿತಿಷ್ಠನ್ " (ಬೃ ಉ 5–7–4 ರಿಂದ 20) ಎಂಬದಾಗಿ ಶ್ರುತಿಯು ಪಂಚಭೂತಗಳನ್ನೂ, ಪ್ರಕೃತಿಪರಿಣಾಮಗಳಾದ ಇಂದ್ರಿಯಗಳು ಮನಸ್ಸು ಮುಂತಾದವುಗಳನ್ನೂ ಒಂದೊಂದಾಗಿ ಹೇಳಿ

ತಿವುಗಳೆಲ್ಲವೂ ಪರಮಾತ್ಮನ ಶರೀರಗಳು ಅವನು ಅವುಗಳಿಗೆ ಆತ್ಮಾ ಎಂದು ಸಂಶಯಗಳಿಗೆ ಆಸ್ಪದವಿಲ್ಲದಂತೆ ಹೇಳಿ ಅನುತರ "ಯಆತ್ಮನಿತಿಷ್ಠನ್ ಆತ್ಮನೋಽನ್ತರೋಯಮಾತ್ಮಾನ ವೇದ ಯಸ್ಯಾತ್ಮಾಶರೀರಂ ಯಆತ್ಮಾನಮನ್ತರೋ ಯಮಯಿತಿ ಸತ ಆತ್ಮಾನ್ತರ್ಯಾಮ್ಯ ಮೃತಂ" ಎಂದು ಪೃಥಿವ್ಯಾದಿಗಳಂತೆಯೇ ಜೀವಾತ್ಮನೂ ಪರಮಾತ್ಮನ ಶರೀರವು ಎಂದು ಘಂಟಾಘೋಷವಾಗಿ ಹೇಳಿರುವುದು.

ಹಾಗೆಯೇ ವೇದಗಳಿಗೆ ಉಪಬ್ರಂಹಣಗಳಾಗಿರುವ ಇತರ ಶಾಸ್ತ್ರಗಳೂ ಈ ಶರೀರಿ ಶರೀರ ಸಂಬಂಧವನ್ನು ಸಮರ್ಥಿಸುತ್ತವೆ. ಅವು ಯಾವುವೆಂದರೆ—

"ಜಗತ್ಸರ್ವಂ ಶರೀರಂತೆ ಸ್ಥೈರ್ಯಂತೇ ವಸುಧಾತಲಂ" (ವಿ.ಪು.) ಎಂದರೆ ಜಗತ್ತು ಮೊತ್ತವೂ ನಿನ್ನ ಶರೀರವು. ಭೂಮಿಯ ಸ್ಥಿರತ್ವವು ನಿನ್ನ ಅಧೀನವು.

"ಅಹಮಾತ್ಮಾಗುಡಾಕೇಶ ಸರ್ವಭೂತಾಶಯಸ್ಥಿತಃ" (ಭ. ಗೀ. 10-20) ಎಂದರೆ ಎಲೈ ಅರ್ಜುನನೇ ನಾನು ಎಲ್ಲಾ ಭೂತಗಳಿಗೂ ಆತ್ಮನು. ಎಲ್ಲಾ ಭೂತ ಗಳ ಹೃದಯದಲ್ಲಿಯೂ ನಾನಿರುವೆನು. "ಸರ್ವಸ್ಯಚಾಹಂ ಹೃದಿಸನ್ನಿವಿಷ್ಟೋ ಮತಃ ಸ್ಮೃತಿರ್ಜ್ಞಾನ ಮಪೋಹನಂಚ" (ಭ. ಗೀ. 15-15) ಎಂದರೆ ಎಲ್ಲರ ಹೃದಯ ದಲ್ಲಿಯೂ ನಾನು ಆತ್ಮವಾಗಿರುವೆನು ; ನನ್ನಿಂದಲೇ ಎಲ್ಲಾ ಜೀವಿಗಳಿಗೂ ಜ್ಞಾನ, ಪ್ರವೃತ್ತಿ, ಮರವು (forget fulness) ಇವುಗಳು ಏರ್ಪಡುವುವು.

ಇವೇ ಮುಂತಾಗಿ ವೇದಾರ್ಥವನ್ನು ಸರಿಯಾಗಿ ತಿಳಿದವರಲ್ಲಿ ಅಗ್ರಗಣ್ಯರಾದ ಪರಾಶರ ವ್ಯಾಸಾದಿ ಮಹರ್ಷಿಗಳ ಸೂಕ್ತಿಗಳಿಂದಲೂ ಪರಬ್ರಹ್ಮವು ಎಲ್ಲಕ್ಕೂ ಆತ್ಮವು, ಚೇತನಾ ಚೇತನ ರೂಪವಾದ ಸಕಲ ವಸ್ತುಗಳೂ ಪರಬ್ರಹ್ಮದ ಶರೀರವು ಎಂದು ನಾವು ತಿಳಿಯುವೆವು. ಈ ಪ್ರಮಾಣಗಳೆಲ್ಲವೂ ಪರಮಾತ್ಮನಿಗೂ ಚಿದಚಿತ್ತುಗಳಿಗೂ ಇರುವ ಶರೀರಿ ಶರೀರ ಸಂಬಂಧವನ್ನು ವಿಶದಪಡಿಸುವುವು.

**ಶರೀರವೆಂದರೇನು :**

ಈ 'ಶರೀರ' ಮತ್ತು 'ಶರೀರಿ' ಎಂಬ ಪದಗಳ ಅರ್ಥವನ್ನು ಸರಿಯಾಗಿ ತಿಳಿದು ಕೊಳ್ಳಬೇಕು. ಲೋಕದಲ್ಲಿ ಜೀವಿಸಿರುವ ಪ್ರಾಣಿಗಳಿಗೆಲ್ಲಾ ಒಂದು ವಿಧವಾದ ಶರೀರ ವೆಂಬುದಿರುವುದನ್ನು ನಾವು ಕಂಡಿದ್ದೇವೆ. ಆ ಪ್ರಾಣಿಗಳು ತಮ್ಮ ಶರೀರಗಳ ಸಹಾಯದಿಂದ ತಿನ್ನುವುದು, ಕಾರ್ಯಮಾಡುವುದು, ಮಾತನಾಡುವುದು ಇತ್ಯಾದಿ ಕ್ರಿಯೆ ಗಳನ್ನು ನೋಡಿದ್ದೇವೆ. ನ್ಯಾಯಸೂತ್ರದಲ್ಲಿ "ಚೇಷ್ಟೇಂದ್ರಿಯಾರ್ಥಾಶ್ರಯಂ ಶರೀರಂ" ಎಂದು ಮೇಲೆ ಹೇಳಿದ ಕ್ರಿಯೆ ಅಥವಾ ಚೇಷ್ಟೆಗಳಿಗೆ ಆಶ್ರಯವಾದ ವಸ್ತುವೇ ಶರೀರವೆಂದು ಹೇಳಿರುವುದು. ಆದರೆ ವೇದಾನ್ತಿಗಳು ಇದನ್ನು ಪೂರ್ಣವಾಗಿ ಪರಿ ಶೀಲಿಸಿ ಅದಕ್ಕೆ ಬೇರೆ ವಿಧವಾದ ಅರ್ಥವನ್ನು ಹೇಳಿರುವರು. "ಯಾವ ದ್ರವ್ಯವು

ಮತ್ತೊಂದಕ್ಕೆ ನಿಯಮೇನ ಧಾರ್ಯವಾಗಿಯೂ, ನಿಯಾಮೇನ ನಿಯಮ್ಯವಾಗಿಯೂ, ನಿಯಮೇನ ಶೇಷವಾಗಿಯೂ ಇರುವುದೋ ಅದು ಮತ್ತೊಂದಕ್ಕೆ ಶರೀರವು ಎಂದು ಶರೀರದ ಲಕ್ಷಣವನ್ನು ಹೇಳಿರುವರು. ಈ ಮೂರು ವಿಧವಾದ ಸಂಬಂಧಗಳೂ ಶರೀರಕ್ಕೂ ಅದರ ಆತ್ಮಕ್ಕೂ ಯಾವಾಗ್ಯೂ ಇದ್ದೇ ಇರುವುದು ಇಲ್ಲಿ 'ಶರೀರಿ' ಎಂಬ ಪದಕ್ಕೆ ಆತ್ಮವೆಂದು ಅರ್ಥ ಶರೀರವು ಅದರೊಳಗಿರುವ ಆತ್ಮನಿಂದ ಧರಿಸ ಲ್ಪಟ್ಟಿರುವುದು ಆತ್ಮನ ಆಧಾರದಿಂದಲೇ ಶರೀರವು ನಿಲ್ಲುವುದು, ನಡೆಯುವುದು, ಕುಳಿತುಕೊಳ್ಳುವುದು ಇತ್ಯಾದಿ ಕಾರ್ಯಗಳನ್ನು ಮಾಡುವುದು ಆತ್ಮವು ಆ ಶರೀರವನ್ನು ತ್ಯಜಿಸಿದ ಒಡನೆಯೇ ಶರೀರವು ಭೂಮಿಗೆ ಬಿದ್ದು ನಿಶ್ಚೇಷ್ಟಿತವಾಗುವುದು ಇದರಿಂದ ಶರೀರವು ಯಾವಾಗ್ಯೂ ಆತ್ಮನಿಂದ ಧರಿಸಲ್ಪಟ್ಟಿರುವಿಕೆಯು ವೇದ್ಯವಾಗುವುದು 'ನಿಯಾಮ್ಯ'ವೆಂದರೆ ತನ್ನ ಇಚ್ಛೆಯಂತೆ ನಿಯಮಿಸುವ ಸಾಮರ್ಥ್ಯಕ್ಕೆ ಒಳಪಟ್ಟಿದ್ದು ಎಂದು ಅರ್ಥ, ಎಂದರೆ ನಿಯಮಿಸಲ್ಪಡುವುದಕ್ಕೆ ಯೋಗ್ಯವಾದದ್ದು ಶರೀರವು ಸಂಪೂರ್ಣವಾಗಿ ಅದರ ಆತ್ಮವು ಉದ್ದೇಶಿಸಿದಂತೆ, ಅದರ ಇಚ್ಛೆಗೆ ಒಳಪಟ್ಟು, ಅದು ನಿಯಮಿಸಿದಂತೆಯೇ ನಡೆಯುವುದಲ್ಲದೆ ಅದಕ್ಕೆ (ಎಂದರೆ ಆ ಶರೀರಕ್ಕೆ) ತನ್ನದೇ ಆದ ಬೇರೆ ವ್ಯವಹಾರವೇ ಇರುವುದಿಲ್ಲವಾದ್ದರಿಂದ ಶರೀರವು ನಿಯಮೇನ ನಿಯಾಮ್ಯ ವಾಗಿರುವುದು ವ್ಯಕ್ತಪಡುವುದು 'ನಿಯಮೇನ' ಎಂಬ ಪದಕ್ಕೆ ಕೆಲ ಕೆಲವು ಕಾಲ ಗಳಲ್ಲಾಗಲಿ, ಕೆಲಕೆಲವು ಸಂದರ್ಭಗಳಲ್ಲಾಗಲಿ ನಿಯಮಿಸುವ ಯೋಗ್ಯತೆಯಿದ್ದು ಮಿಕ್ಕ ಕಾಲಗಳಲ್ಲಾಗಲಿ, ಇತರ ಸಂದರ್ಭಗಳಲ್ಲಾಗಲೀ ಆ ಸಾಮರ್ಥ್ಯವಿಲ್ಲವೆಂಬ ತಡೆಗಳಿಲ್ಲದೆ ಯಾವಾಗ್ಯೂ ಮತ್ತು ಎಲ್ಲಾ ಸಂದರ್ಭಗಳಲ್ಲಿಯೂ ಆ ಸಾಮರ್ಥ್ಯ ವಿರುವುದು ಎಂದು ತಾತ್ಪರ್ಯವು.

ಹಾಗೆಯೇ ಶರೀರವು ನಿಯಮೇನ ಆತ್ಮಕ್ಕೆ ಶೇಷವಾಗಿರುವುದು ಶೇಷತ್ವ ವೆಂದರೆ ಶೇಷ (ದಾಸ) ನಾದ ತಾನು ಮಾಡುವ ಕಾರ್ಯಗಳೆಲ್ಲವನ್ನೂ ತನ್ನ ಪ್ರಯೋ ಜನಕ್ಕಾಗಿ ಅಲ್ಲದೆ ತನ್ನ ಶೇಷಿಯು ಎಂದರೆ ಯಜಮಾನನ ಪ್ರಯೋಜನಕ್ಕಾಗಿಯೇ ಮಾಡುವುದು ಶರೀರಗಳು ಮಾಡುವ ಕಾರ್ಯಗಳೆಲ್ಲವೂ ಅದರೊಳಗಿರುವ ಆತ್ಮನ ಪ್ರೇರಣೆಯಂತ ಅವನ ತೃಪ್ತಿಗಾಗಿಯೇ ನಡೆಯುತ್ತಿರುವುದನ್ನು ನಾವು ವ್ಯವಹಾರದಲ್ಲಿ ಕಂಡಿರುವೆವು ಈ ಶೇಷತ್ವವು ಸಂಪೂರ್ಣವಾದ ಸೇವಾವೃತ್ತಿ ಅಥವಾ ಆಳಿನ ಕೆಲಸ ವೆಂದು ಹೇಳಿದಂತಾಗುವುದು ಲೋಕ ವ್ಯವಹಾರದಲ್ಲಿ ಆಳುಗಳು ಯಜಮಾನನಿಗಾಗಿ ಮಾಡುವ ಕಾರ್ಯಗಳಿಗಾಗಿ ತಮ್ಮ ಜೀವನ ಸುಖಕ್ಕಾಗಿ ಸಂಬಳವನ್ನು ಪಡೆಯುವುದನ್ನು ಕಂಡಿದ್ದೇವೆ ಆದರೆ ಆ ಆಳುಮಾಡುವ ಕಾರ್ಯಗಳೆಲ್ಲವೂ ಅವನ ಯಜಮಾನನ ಇಷ್ಟ ದಂತೆ ಇದ್ದು ಅವನ (ಎಂದರೆ ಆ ಯಜಮಾನನ) ಪ್ರಯೋಜನಕ್ಕಾಗಿಯೇ ಮಾಡ ಲ್ಪಡುವುದು ಆದರೆ ಶರೀರವು ಆ ಪ್ರಕಾರವಾಗಿ ಮಾಡುವ ಕಾರ್ಯದಲ್ಲಿ ಯಾವ ವಿಧ

ವಾದ ಸ್ವಪ್ರಯೋಜನವೂ ಇಲ್ಲದೆ ಆತ್ಮನ ಪ್ರಯೋಜನಕ್ಕಾಗಿಯೇ ಇರುವುದು ಆ ಶರೀರದ ಪೋಷಣೆಯನ್ನು ಆತ್ಮನೇ ನಿರ್ವಹಿಸುವನು

**ಪರಮಾತ್ಮನು ಸರ್ವಾಂತರಾತ್ಮಾ ಮತ್ತು ಸರ್ವನಿಯಾಮಕ :**

ಶರೀರ ಶರೀರಿ ಸಂಬಂಧವು ಈ ಮೇಲೆ ಹೇಳಿದಂತಿರುವುದು, ಸಮಸ್ತವಾದ ಚೇತನಾಚೇತನಗಳೂ ಮೇಲೆ ಹೇಳಿದ ಕ್ರಮದಿಂದ ಶರೀರವಾಗಿದ್ದು ಪರಮಾತ್ಮನು ಅವುಗಳಿಗೆ ಆತ್ಮನಾಗಿರುವನು "ಅನೇನ ಜೀವೇನಾತ್ಮನಾನು ಪ್ರವಿಶ್ಯ ನಾಮ ರೂಪೇ ವ್ಯಾಕರವಾಣಿ (ಛಾಂ ಉ. 6–3–2) ಎಂದರ ಜೀವರುಗಳಲ್ಲಿ ಮೊದಲು ನಾನು ಅಂತರಾತ್ಮನಾಗಿ ಪ್ರವೇಶಿಸಿ, ಆ ಜೀವರುಗಳನ್ನು ಅಚಿದ್ರವ್ಯಗಳಲ್ಲಿ ಪ್ರವೇಶ ಮಾಡುವಂತೆ ಮಾಡಿ ಆ ರೀತಿಯಾಗಿ ಸಮಸ್ತ ವಸ್ತುಗಳಿಗೂ ನಾಮರೂಪಗಳನ್ನುಂಟು ಮಾಡುವನು, ಎಂಬ ಶ್ರುತಿವಾಕ್ಯರೀತ್ಯಾ ಈ ಜಗತ್ತಿನಲ್ಲಿ ನಾಮರೂಪಗಳನ್ನು ಪಡೆದಿರುವ ಒಂದೊಂದು ವಸ್ತುವಿನಲ್ಲಿಯೂ ಪರಮಾತ್ಮನ ಅಂತರ್ಯಾಮಿತ್ವವಿರುವುದು ಎಂದರೆ – ಯಾವ ಚಿದಚಿದ್ವಸ್ತುವೇ ಆಗಲಿ ಪರಮಾತ್ಮನ ಅಂತರ್ಯಾಮಿತ್ವವಿಲ್ಲದಿದ್ದರೆ ಅವುಗಳಿಗೆ ಸತ್ತೇ, ಎಂದರೆ ಇರುವಿಕೆಯೇ (Existance) ಇರುವುದಿಲ್ಲ ಅದರಿಂದ ಪರಮಾತ್ಮನು ಸರ್ವಭೂತಾನ್ತರಾತ್ಮನು, ಸಮಸ್ತಭೂತಗಳೂ ಅವನ ಶರೀರಗಳು ಈ ವಿಧವಾದ ಶರೀರಿ ಶರೀರ ಸಂಬಂಧದಿಂದ ಸಮಸ್ತ ಚಿದಚಿತ್ತುಗಳೂ ಪರಮಾತ್ಮನಿಗೆ ನಿಯಮೇನಧಾರ್ಯವಾಗಿಯೂ, ನಿಯಮೇನ ನಿಯಾಮ್ಯವಾಗಿಯೂ, ನಿಯಮೇನ ಶೇಷಿಯಾಗಿಯೂ ಇರುವುವು.

"ಸ್ವಾಧೀನ ತ್ರಿವಿಧ ಚೇತನಾಚೇತನ ಸ್ವರೂಪ ಸ್ಥಿತಿಪ್ರವೃತ್ತಿ ಭೇದಂ" ಎಂದರ ಸಮಸ್ತವಾದ ಚೇತನಾಚೇತನಗಳ ಸ್ವರೂಪ, ಸ್ಥಿತಿ, ಪ್ರವೃತ್ತಿಗಳು ಪರಮಾತ್ಮನ ಸಂಕಲ್ಪಕ್ಕೆ ಅಧೀನವಾದವುಗಳು ಎಂದು ಭಗವದ್ರಾಮಾನುಜಾಚಾರ್ಯರು ತಮ್ಮ ಗದ್ಯತ್ರಯದಲ್ಲಿ ಹೇಳಿರುವರು ಶ್ರುತಿಸ್ಮೃತಿಗಳೂ ಇದನ್ನು ಸಮರ್ಥಿಸುತ್ತವೆ " ಅನ್ತಃ ಪ್ರವಿಷ್ಟಶ್ಶಾಸ್ತಾಜನಾನಾಂ ಸರ್ವಾತ್ಮಾ" (ಯಜುರಾರಣ್ಯಕ 3 – 20) ಎಂದರ ಸರ್ವಾಂತರ್ಯಾಮಿಯಾದ ಪರಮಾತ್ಮನು ಎಲ್ಲದರಲ್ಲಿಯೂ ಆತ್ಮನಾಗಿ ಪ್ರವೇಶಿಸಿ ಅವುಗಳನ್ನು ತನ್ನ ಇಷ್ಟಪ್ರಕಾರವಾಗಿ ನಿಯಮಿಸುವನು, ಎಂದೂ, 'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚಮತ್ವಾ (ಶ್ವೇ ಉ 1–12) ಎಂದರೆ ಕರ್ಮಫಲಭೋಕ್ತಾವಾದ ಜೀವಾತ್ಮರು, ಕರ್ಮಫಲಾನುಭವ ಸಾಮಗ್ರಿಯಾದ ಪ್ರಕೃತಿ ಇವರಡನ್ನೂ ತನ್ನ ಇಷ್ಟಪ್ರಕಾರ ಪ್ರೇರೇಸುವನೇ ಪರಮಾತ್ಮನು, ಎಂದೂ, "ಪ್ರಧಾನ ಕ್ಷೇತ್ರಜ್ಞಪತಿರ್ಗುಣೇಶಃ (ಶ್ವೇ ಉ 6–16) ಎಂದರೆ ಪರಮಾತ್ಮನು ಪ್ರಕೃತಿ, ಜೀವಾತ್ಮರುಗಳಿಗೆಲ್ಲಾ ಒಡೆಯನು ಮತ್ತು ಗುಣಗಳಿಗಲ್ಲಾ ಈಶ್ವರನು, ಎಂದೂ, "ಅಹಮಾತ್ಮಾಗುಡಾಕೇಶ

ಸರ್ವಭೂತಾಶಯಸ್ಥಿತಃ" (ಭ. ಗೀ 10–20) ಎಂದರೆ ಎಲೈ ಅರ್ಜುನನೇ ಸಮಸ್ತ ಭೂತಗಳಲ್ಲಿಯೂ ನಾನು ಅಂತರಾತ್ಮನಾಗಿರುವನು, ಎಂದೂ "ಸರ್ವಸ್ಯಚಾಹಂ ಹೃದಿಸನ್ನಿವಿಷ್ಟೋ ಮತ್ತಃಸ್ಮೃತಿರ್ಜ್ಞಾನಮಪೋಹನಂಚ" (ಭ ಗೀ 15–15) ಎಂದರೆ ಸಮಸ್ತ ಪ್ರಾಣಿಗಳ ಹೃದಯದಲ್ಲಿಯೂ ನಾನು ಅಡಗಿರುವನು ಮತ್ತು ನನ್ನಿಂದಲೇ ಜೀವರುಗಳ ಜ್ಞಾನ, ಪ್ರವೃತ್ತಿ, ಮರವು ಮುಂತಾದವುಗಳು ಏರ್ಪಡುವುವು ಎಂದೂ ಇವೇ ಮುಂತಾದ ಶ್ರುತಿಸ್ಮೃತ್ಯಾದಿ ವಾಕ್ಯಗಳು ಜೀವಪರಮಾತ್ಮರುಗಳ ಶರೀರಶರೀರಿ ಸಂಭಂಧವನ್ನೂ ಪರಮಾತ್ಮನ ನಿಯಮನ ಸಾಮರ್ಥ್ಯವನ್ನೂ ವಿಶದಪಡಿಸುವುವು.

## ವಿಶಿಷ್ಟಾದ್ವೈತಪದದ ಅರ್ಥ ಮತ್ತು ಪ್ರಯೋಜನ :

ಈ ಶರೀರಿ ಶರೀರ ಸಂಬಂಧವು ನಮ್ಮ ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಬಹು ಮುಖ್ಯವಾದ ವಿಷಯವೆಂದು ಹಿಂದೆಯೇ ಹೇಳಿರುವುದು 'ವಿಶಿಷ್ಟಾದ್ವೈತ'ವೆಂಬ ಪದಕ್ಕೆ ವಿಶೇಷಣಗಳೊಡನೆ ಕೂಡಿದ ಒಂದೇ ವಸ್ತು – ಅದೇ ಪರಬ್ರಹ್ಮವು ಎಂಬುವುದು ನಮ್ಮ ವಿವರಣವು ಇಲ್ಲಿ ಹೇಳಿರುವ ವಿಶೇಷಣಗಳೇ ಚಿತ್ತು ಮತ್ತು ಅಚಿತ್ತುಗಳು ಇವೆರಡೂ ಬೇರೆ ಬೇರೆ ಪದಾರ್ಥಗಳಾದಾಗ್ಯೂ ಇವು ಪರಮಾತ್ಮನಿಗೆ ಶರೀರಗಳಾಗಿ ಪರಮಾತ್ಮನು ಇವುಗಳಿಗೆ ಆತ್ಮವಾದ್ದರಿಂದ ಅವೆರಡೂ ಶರೀರತಃ ಪರಮಾತ್ಮನಿಗೆ ವಿಶೇಷಣಗಳಾಗಿ ಆ ವಿಶೇಷಣಗಳೊಡನೆ ಕೂಡಿ ವಿಶೇಷ್ಯನಾದ ಪರಮಾತ್ಮನೊಬ್ಬನೇ ನಿಲ್ಲುವನು

ವಿಶೇಷಣಗಳು ಎರಡು ವಿಧವಾಗಿರುವುವು " ದೇವದತ್ತನು ಕುಂಡಲಗಳನ್ನು ಧರಿಸಿರುವನು " ಎಂದು ಹೇಳಿದರೆ ಅಲ್ಲಿ ಕುಂಡಲಗಳು ದೇವದತ್ತನಿಗೆ ವಿಶೇಷಣಗಳಾಗುವುವು ಆದರೆ ಅವು ಅವನ ಶರೀರವಲ್ಲ, ದೇವದತ್ತನ ಶರೀರವು ಅವನಿಗೆ ವಿಶೇಷಣವು ಆದರಿಂದ ಶರೀರವಾಗಿದ್ದು ವಿಶೇಷಣವಾಗಿರುವುದೊಂದು, ಶರೀರವಾಗಿರದೆ ವಿಶೇಷಣವಾಗಿರುವುದು ಮತ್ತೊಂದು, ಹೀಗೆ ವಿಶೇಷಣಗಳು ಇಲ್ಲಿ ಎರಡು ವಿಧವಾಗಿರುವುವು ಆದ್ದರಿಂದಲೇ ಚಿದಚಿತ್ತುಗಳು ಪರಮಾತ್ಮನಿಗೆ ಶರೀರಗಳಾಗಿದ್ದು ವಿಶೇಷಣಗಳಾಗಿರುವುವು ಎಂದು ಹಿಂದೆ ಹೇಳಿತು.

"ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ" (ಛಾಂ. 6–2–1) ಎಂಬ ಶ್ರುತಿವಾಕ್ಯಕ್ಕೆ ಕೆಲವರು ಸತ್ಪದಾರ್ಥವಾದ ಆ ಬ್ರಹ್ಮವೊಂದೇ ಇದ್ದಿತು, ಎರಡನೆಯ ಪದಾರ್ಥವೆಂಬುವುವೇ ಇರಲಿಲ್ಲವೆಂಬ ಅರ್ಥವನ್ನು ಮಾಡಿ, ಚಿತ್ತು

ಅಚಿತ್ತುಗಳು ಮೊದಲು ಇರಲಿಲ್ಲ ಬ್ರಹ್ಮವೊಂದೇ ಇದ್ದಿತು, ಆ ಬ್ರಹ್ಮವೇ ಚಿದ ಚಿತ್ತುಗಳಾಗಿ ಪರಿಣಮಿಸಿತು ಎಂದು ಹೇಳುತ್ತಾರೆ ಈವಿಧವಾಗಿ ಅರ್ಥಮಾಡುವುದರಿಂದ ಈ ಕೆಳಗೆ ಹೇಳುವ ಕೆಲವು ದೋಷಗಳು ಸಂಭವಿಸುವುವು —(1) ಬ್ರಹ್ಮಕ್ಕೆ ಸ್ವರೂಪ ಪರಿಣಾಮವನ್ನು ಹೇಳಿದರೆ 'ಬ್ರಹ್ಮವು ನಿರ್ವಿಕಾರವು, ಎಂದು ಹೇಳುವ ಶ್ರುತಿವಾಕ್ಯಗಳೊಡನೆ ವಿರೋಧವು ಸಂಭವಿಸುವುದು (2) ಬ್ರಹ್ಮವು ಸ್ವರೂಪತಃ ಚಿದಚಿತ್ತುಗಳಾಗಿ ಪರಿಣಮಿಸಿದರೆ ಚಿದಚಿತ್ತುಗಳಿಗೆ ಶ್ರುತಿಗಳಲ್ಲಿ ಹೇಳಿರುವ ದೋಷಗಳೆಲ್ಲವೂ ಬ್ರಹ್ಮಕ್ಕೆ ತಗಲುತ್ತವೆ ಆ ದೋಷಗಳು ಯಾವುವೆಂದರೆ—ಜೀವಾತ್ಮರುಗಳಿಗೆ ಕರ್ಮವಶ್ಯತೆ ಅಜ್ಞಾನ ಇತ್ಯಾದಿ ದೋಷಗಳಿರುವುವು ಪ್ರಕೃತಿಗೆ ಹೇಯತ್ವವೂ ಪರಿಣಾಮವನ್ನು ಹೊಂದುತ್ತಾ ಇರುವುದು ಎಂಬ ದೋಷವೂ ಇರುವುವು ಈ ದೋಷಗಳೆಲ್ಲವೂ ಬ್ರಹ್ಮಕ್ಕೆ ಅಂಟಿಕೊಳ್ಳ ಬೇಕಾಗುವುದು ಆಗ ಯಸ್ಸರ್ವಜ್ಞಿ ಸ್ಸರ್ವವಿತೆ (ಮುಂ,ಉ 1–1–10) ಎಂದರೆ ಪರಮಾತ್ಮನು ಸರ್ವಜ್ಞನು ಅವನು ಸಮಸ್ತವನ್ನು ಏಕಕಾಲದಲ್ಲಿ ಸಾಕ್ಷಾತ್ಕರಿಸ ಬಲ್ಲನು "ಅವಿಕಾರಾಯ ಶುದ್ಧಾಯ" (ಸಹಸ್ರನಾಮಾಧ್ಯಾಯ) ಎಂದರೆ ಪರಮಾತ್ಮನು ನಿರ್ವಿಕಾರನು, ಪರಿಶುದ್ಧನು, ಇತ್ಯಾದಿ ಬ್ರಹ್ಮನ ಸರ್ವಜ್ಞತ್ವ ನಿರ್ವಿಕಾರತ್ವ ಪರಿಶುದ್ಧತ್ವ ಇತ್ಯಾದಿಗಳನ್ನು ಹೇಳುವ ಶ್ರುತಿವಾಕ್ಯಗಳೊಡನೆ ವಿರೋಧಿಸುವುದು, ಇವೆಲ್ಲಕ್ಕೂ ಸಮಾಧಾನ ರೂಪವಾಗಿ ಈ ಚಿದಚಿತ್ತುಗಳು ಬ್ರಹ್ಮದ ಶರೀರವು'ಎಂದು ಹೇಳಿದರೆ ಸೃಷ್ಟಿಯ ವಿಕಾರಗಳೆಲ್ಲವೂ ಶರೀರಕ್ಕೆ ಉಂಟಾಗಿ ಅಂತರಾತ್ಮಾವಾಗಿರುವ ಬ್ರಹ್ಮವು ನಿರ್ವಿಕಾರವಾಗಿ ಯಾವ ದೋಷವೂ ಅಂಟದಂತೆ ಪರಿಶುದ್ಧವಾಗಿಯೇ ನಿಲ್ಲುವುದು ಮನುಷ್ಯಾದಿಗಳ ಶರೀರಗಳಲ್ಲುಂಟಾಗುವ ಬಾಲ್ಯ ಯೌವನ, ವಾರ್ಧಿಕ್ಯ, ರೋಗ ಇತ್ಯಾದಿ ವಿಕಾರಗಳು ಶರೀರಕ್ಕೆ ಮಾತ್ರವೇ ಉಂಟಾಗಿ ಆತ್ಮಕ್ಕೆ ಅವು ತಗಲದೆ ಇರುವುದನ್ನು ವ್ಯವಹಾರದಲ್ಲಿ ಕಂಡಿರುವೆವು ಬ್ರಹ್ಮದ ವಿಷಯದಲ್ಲಿಯೂ ಹೀಗೆಯೇ ಎಂದು ತಿಳಿಯಬೇಕು,

ಆದರೆ ಈ ಚೇತನಾ ಚೇತನಗಳನ್ನು ಸೃಷ್ಟಿಯ ಅನಂತರದಲ್ಲಿ ಕಂಡಿರುವೆವಲ್ಲವೆ ಸೃಷ್ಟಿಗೆ ಮೊದಲು ಅವುಗಳಿರಲಿಲ್ಲವಲ್ಲಾ ಅವು ಎಲ್ಲಿಂದ ಬಂದವು ಎಂದು ಕೇಳ ಬಹುದು, ಅವೆಲ್ಲವೂ ಸೃಷ್ಟಿಗೆ ಮೊದಲೂ ಇದ್ದುವು ಎಂದು ನಾವು ಹೇಳುವೆವು ಈ ಚಿದಚಿತ್ತುಗಳಿಗೆ ಸ್ಥೂಲ ಮತ್ತು ಸೂಕ್ಷ್ಮರೂಪಗಳೆಂಬ ಎರಡು ರೂಪಗಳಿರುವುವು ಪ್ರಳಯಕಾಲದಲ್ಲಿ ಪರಮಾತ್ಮನು ಸೂಕ್ಷ್ಮರೂಪದಲ್ಲಿರುವ ಚಿದಚಿತ್ತುಗಳನ್ನು ಶರೀರವನ್ನಾಗಿ ಹೊಂದಿರುವನು ಆಗ ಆ ಚಿದಚಿತ್ತುಗಳು ನಾಮರೂಪಗಳಿಗೆ ಅನರ್ಹವಾದ ಸ್ಥಿತಿಯಲ್ಲಿರುವುವು ಸೃಷ್ಟಿಕಾಲವು ಆರಂಭವಾದ ಒಡನೆಯೇ ಪರಮಾತ್ಮನ ಸಂಕಲ್ಪದಿಂದ ಸೂಕ್ಷ್ಮರೂಪದಲ್ಲಿರುವ ಚಿದಚಿತ್ತುಗಳು ಸ್ಥೂಲರೂಪವನ್ನು ಪಡೆದು ನಾಮ

ರೂಪಗಳೊಡನೆ ಕೂಡಿ ಈ ದೃಶ್ಯ ಪ್ರಪಂಚ ರೂಪವಾಗಿ ಪರಿಣಮಿಸುವುದು ಪುನಃ ಪ್ರಳಯ ಕಾಲವು ಪ್ರಾಪ್ತವಾದಾಗ ಚಿದಚಿತ್ತುಗಳು ತಮ್ಮ ಸ್ಥೂಲರೂಪವನ್ನು ಕಳೆದು ಕೊಂಡು ಸೂಕ್ಷ್ಮರೂಪವನ್ನು ಹೊಂದಿ ಪರಮಾತ್ಮನ ಶರೀರವಾಗಿ ನಿಲ್ಲುವುವು ಹೀಗೆ ಸೃಷ್ಟಿ ಪ್ರಳಯಗಳಲ್ಲುಂಟಾಗುವ ವ್ಯತ್ಯಾಸಗಳು ಪರಮಾತ್ಮನ ಶರೀರಗಳಾದ ಚಿದ ಚಿತ್ತುಗಳಿಗೆ ಉಂಟಾಗುವುವೇವಿನಾ ತದಂತರ್ಯಾಮಿಯಾದ ಪರಮಾತ್ಮನು ಯಾವ ವಿಕಾರವೂ ಇಲ್ಲದೆ ತನ್ನ ಜ್ಞಾನಾನಂದಾದಿ ಸಮಸ್ತ ಕಲ್ಯಾಣಗುಣಗಳೊಡನೆ ಪೂರ್ಣ ನಾಗಿರುವನು ಇತರ ಮತಸ್ಥರು ಹೇಳುವಂತೆ ಪರಮಾತ್ಮನಿಗೆ ಮಾಯೆಯೆಂಬುವುದು ಆವರಿಸುವುದೆಂದಾಗಲಿ, ಅವನೇಸ್ಥೂಲ ಪ್ರಪಂಚವಾಗಿ ಪರಿಣಮಿಸುವನೆಂದಾಗಲಿ ಹೇಳಿದರೆ ಅದರಿಂದ ನಿರ್ವಿಕಾರನಾಗಿ ಸರ್ವಜ್ಞನಾಗಿರುವ ಪರಮಾತ್ಮನಿಗೆ ಅನು ಪಪತ್ತಿ ಗಳೂ ದೋಷಗಳೂ ಸಂಭವಿಸುವ ಸಂದರ್ಭಗಳುಂಟಾಗಿ ಅನೇಕ ಶ್ರುತಿವಾಕ್ಯಗಳೊಡನೆ ವಿರೋಧವು ಸಂಭವಿಸುವುದು.

### ಪ್ರಕೃತಿ ಜೀವಾತ್ಮ ಇಬ್ಬರೂ ಪರಮಾತ್ಮನಂತೆಯೇ ಶಾಶ್ವತಗಳು —

ಈ ಸಿದ್ಧಾಂತರೀತ್ಯಾ ಚಿದಚಿತ್ತುಗಳು ಪರಮಾತ್ಮನಿಗೆ ಶಾಶ್ವತಗಳಾದ ಶರೀರಗ ಳಾಗಿ ಪರಮಾತ್ಮನಂತೆಯೇ ಉತ್ಪತ್ತಿಲಯಗಳಿಲ್ಲದೆ ಯಾವಾಗ್ಯೂ ಇರುವ ವಸ್ತುಗಳಾಗಿರ ಬೇಕು ಅದಕ್ಕೆ ಪ್ರಮಾಣವೇನು? ಎಂದು ಕೆಲವರು ಕೇಳಬಹುದು ಚಿದಚಿತ್ತು ಗಳಿಗೆ ಉತ್ಪತ್ತಿಲಯಗಳಿಲ್ಲವೆಂಬ ವಿಷಯದಲ್ಲಿ ಶ್ರುತಿಗಳಲ್ಲಿ ಅನೇಕ ಪ್ರಮಾಣ ಗಳಿರುವುವು.

"ಜ್ಞಾಜ್ಞೌದ್ವಾವಜಾ ಈಶನೀಶೌ"(ಮಂತ್ರಿಕೋಪನಿಷತ್) ಎಂದರೆ ಜೀವಾತ್ಮರು, ಈಶ್ವರ, ಇವರಿಬ್ಬರೂ ಉತ್ಪತ್ತಿಯಿಲ್ಲದವರು, ಅವುಗಳಲ್ಲಿ ಒಂದು ಈಶ್ವರ, ಮತ್ತೊಂದು ಅನೀಶ್ವರ-ಎಂಬ ಶ್ರುತಿವಾಕ್ಯವು ಪರಮಾತ್ಮನಂತೆಯೇಜೀವಾತ್ಮರೂ ಉತ್ಪತ್ತಿಯಿಲ್ಲದವರು, ಎಂದರೆ ಯಾವಾಗ್ಯೂ ಶಾಶ್ವತವಾಗಿರತಕ್ಕವರು ಎಂದು ಹೇಳುವುದು

"ಅಜಾಮೇಕಾಂಲೋಹಿತ ಶುಕ್ಲಕೃಷ್ಣಾಂ ಬಹ್ವೀಃ ಪ್ರಜಾಃ ಸೃಜಮಾನಾಂ ಸರೂಪಾಃ। ಅಜೋಹ್ಯೇಕೋಜುಷಮಾಣೋನುಶೇತೇಜಹಾತ್ಯೇನಾಂಭುಕ್ತ ಭೋಗಾ ಮಜೋನ್ಯಃ " (ತೈ ನಾ 10–5) ಎಂಬ ಶ್ರುತಿವಾಕ್ಯವು ಜೀವನಂತೆಯೇ ಪ್ರಕೃತಿಯೂ ಉತ್ಪತ್ತಿಯಿಲ್ಲದ್ದು ಎಂಬುವುದನ್ನು ಹೇಳುತ್ತದೆ ಈ ರೀತಿಯಾಗಿ ಶ್ರುತಿಯಲ್ಲಿ ಅನೇಕವಾಕ್ಯಗಳಿವೆ "ಪ್ರಕೃತಿಂ ಪುರುಷಂಚೈವ ವಿದ್ಧ್ಯನಾದೀಉ ಭಾವಪಿ"

(ಭ ಗೀ. 13–20) ಎಂದರೆ ಪ್ರಕೃತಿ ಮತ್ತು ಜೀವಾತ್ಮರುಗಳಿಬ್ಬರೂ ಅನಾದಿಯಾದವರೆಂದು ತಿಳಿ ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳಿರುವನು. ಇವುಗಳ ಆಧಾರದಿಂದಲೇ ಚಿದಚಿತ್ತುಗಳು ಪರಮಾತ್ಮನಂತೆಯೇ ಶಾಶ್ವತಗಳೆಂದೂ, ಅವು ಪ್ರಳಯ ಕಾಲದಲ್ಲಿ ಸೂಕ್ಷ್ಮರೂಪವಾಗಿಯೂ, ಸೃಷ್ಟಿಕಾಲದಲ್ಲಿ ಸ್ಥೂಲರೂಪದೊಡನೆಯೂ ಇದ್ದು ಪರಮಾತ್ಮನ ಶರೀರಗಳಾಗಿರುವುವು ಎಂದು ಸಿದ್ಧಾಂತ ಮಾಡಲ್ಪಟ್ಟಿರುವುದು.

**ಕಾರ್ಯಕಾರಣಗಳ ಅಭೇಧ:—**

ಕಾರಣವಾದ ಬ್ರಹ್ಮವೂ ಕಾರ್ಯವಾದ ಜಗತ್ತೂ ಬೇರೆಬೇರೆದ್ರವ್ಯಗಳಲ್ಲ ಒಂದೇ ದ್ರವ್ಯವು ಎಂದು ಈಮೇಲಿನ ಶರೀರಿಶರೀರ ಸಂಬಂಧ ವಿವರಣಗಳಿಂದ ತಿಳಿದು ಬರುವುದು. ಇವೆರಡರ ತೋರುವಿಕೆಯು ಬೇರೆ ಬೇರೆಯಾಗಿರುವುದೇವಿನಾ ದ್ರವ್ಯವು ಬೇರೆಬೇರೆಯಲ್ಲ. ಒಂದು ವಿಧವಾದ ಸಂಬಂಧದೊಡನೆ ಎಂದರೆ ಸೇರುವಿಕೆಯೊಡನೆ ಕೂಡಿರುವುದು ಕಾರಣವು, ಬೇರೊಂದು ವಿಧವಾದ ಸೇರುವಿಕೆ ಯೊಡನೆ ಕೂಡಿರುವುದು ಕಾರ್ಯವು. ಸೂಕ್ಷ್ಮಚಿದಚಿತ್ತುಗಳನ್ನು ಶರೀರವಾಗಿ ಉಳ್ಳ ಬ್ರಹ್ಮವು ಕಾರಣವು; ಸ್ಥೂಲವಾಗಿರುವ ಚಿದಚಿತ್ತುಗಳನ್ನು ಶರೀರವಾಗಿ ಉಳ್ಳ ಬ್ರಹ್ಮವು ಕಾರ್ಯವು. ಆದ್ದರಿಂದ ಸಮಸ್ತಕ್ಕೂ ಕಾರಣವಾದ ಬ್ರಹ್ಮವನ್ನು ತಿಳಿದದ್ದೇ ಆದರೆ ಅದರ ಕಾರ್ಯವಾದ ಸಮಸ್ತ ಜಗತ್ತೂ ತಿಳಿಯಲ್ಪಟ್ಟದ್ದಾಗುವುದು, ಎಂದು ಹೇಳುವುದು ಉಪಪನ್ನವೇ ಆಗಿರುತ್ತದೆ. ಈ ಭಾವವನ್ನು ಮನಸ್ಸಿನಲ್ಲಿಟ್ಟುಕೊಂಡೇ "ಯೇನಾಶ್ರುತಂಶ್ರುತಂ ಭವತಿ" (ಛಾಂ ಉ–6–1–3) ಎಂದು ಶ್ವೇತಕೇತುವಿಗೆ ಅವನ ತಂದೆಯು ಹೇಳಿದರು. ಈ ಸಾಮಂಜಸ್ಯವೇ 'ತತ್ತ್ವಮಸಿ' (ಛಾಂ ಉ.6–8–7) ಎಂಬ ಶ್ರುತಿ ವಾಕ್ಯದಲ್ಲಿರುವುದು. ಇಲ್ಲಿ 'ತತ್' ಎಂಬುವುದು ಸೂಕ್ಷ್ಮ ಚಿದ ಚಿದ್ವಿಶಿಷ್ಟವಾದ ಕಾರಣವಾದ ಬ್ರಹ್ಮವನ್ನು ಹೇಳುತ್ತದೆ. 'ತ್ವಂ' ಎಂಬ ಪದವು ಇಲ್ಲಿ ಶ್ವೇತಕೇತುವನ್ನು ನಿರ್ದೇಶಿಸಿ ಅವನಲ್ಲಿ ಅಂತರಾತ್ಮನಾಗಿ ಶ್ವೇತ ಕೇತುವನ್ನು ಶರೀರವಾಗಿ ಉಳ್ಳ ಕಾರ್ಯವಾದ ಬ್ರಹ್ಮವನ್ನು ನಿರ್ದೇಶಿಸುತ್ತದೆ. ಇವೆರಡೂ ಒಂದೇ ಎಂದು 'ತತ್ತ್ವಮಸಿ" ಎಂಬ ವಾಕ್ಯವು ಹೇಳಿ ಕಾರ್ಯಕಾರಣಗಳೆರಡೂ ಒಂದೇ ದ್ರವ್ಯವು ಎಂಬುವುದನ್ನು ಸ್ಥಾಪಿಸುತ್ತದೆ.

**ಸಮಸ್ತ ಪದಗಳೂ ಬ್ರಹ್ಮಪರ್ಯಂತವಾಗಿ ಅರ್ಥವುಳ್ಳವುಗಳು —**

ಈ ಶರೀರಿ ಶರೀರ ಸಂಬಂಧವನ್ನು ಅರಿಯುವುದರಿಂದ ವೇದದ ಸಮಸ್ತ ಪದಗಳೂ ಬ್ರಹ್ಮವನ್ನೇ ಹೇಳುವುವು ಎಂಬ ಜ್ಞಾನವುಂಟಾಗುವುದು. ವೇದಾಂತ ಶಾಸ್ತ್ರವನ್ನು ಅಭ್ಯಾಸ ಮಾಡದವರು ಸಮಸ್ತ ಪದಾರ್ಥಗಳೂ ಮತ್ತು ಸಮಸ್ತ ಜೀವಾತ್ಮರೂ

ಬ್ರಹ್ಮವನ್ನು ಆತ್ಮವಾಗಿ ಉಳ್ಳವರು ಎಂಬುವುದನ್ನು ತಿಳಿಯುವುದಿಲ್ಲ ಎಲ್ಲಾ ಶಬ್ದಗಳೂ ಅವುಗಳ ಅರ್ಥದಲ್ಲಿ ಏಕದೇಶವಾದ ಆಯಾ ಪದಾರ್ಥಗಳನ್ನು ಸೂಚಿಸಿ ಅಷ್ಟಕ್ಕೇ ನಿಂತು ಬಿಡುವುವು ಎಂದು ತಿಳಿಯುವರು ಆದರ ವೇದಾಂತ ವಾಕ್ಯಗಳನ್ನು ತಿಳಿದವರೋ ಎಂದರ 'ಸಮಸ್ತವಸ್ತುಗಳೂ ಬ್ರಹ್ಮನಿಂದ ನಿರ್ಮಿಸಲ್ಪಟ್ಟವುಗಳು, ಬ್ರಹ್ಮವನ್ನೇ ಅಂತರ್ಯಾಮಿಯಾಗಿ ಉಳ್ಳವುಗಳು, ಆದ್ದರಿಂದ ಅವುಗಳಿಗೆ ಬ್ರಹ್ಮಾತ್ಮಕತ್ವ ವಿರುವುದು, ಆ ಪದಾರ್ಥಗಳನ್ನು ಸೂಚಿಸುವ ಶಬ್ದಗಳೆಲ್ಲವೂ ಆಯಾ ವಿಶೇಷಣಗಳಿಂದ ಕೂಡಿಕೊಂಡಿರುವ ಬ್ರಹ್ಮವನ್ನು ಸೂಚಿಸುವ ಶಕ್ತಿಯಿಂದ ಕೂಡಿರುವುವು, ಎಂಬುವುದನ್ನು ತಿಳಿಯುವರು

ಹೀಗೆ ಹೇಳಿದರೆ ಹಸು, ಕುದುರೆ ಮೊದಲಾದ ಪದಗಳಿಗೆ ಆಯಾಪದಾರ್ಥಗಳನ್ನು ನಿರ್ದೇಶಿಸುವ ಶಕ್ತಿಯಿರುವುದಾಗಿ ಲೋಕರೂಢಿಯಾಗಿರುವ ವ್ಯುತ್ಪತ್ತಿಯು ಬಾಧಿತವಾಗುವುದಿಲ್ಲವೋ ಎಂದು ಕೇಳಿದರೆ—ಅದು ಹಾಗಾಗುವುದಿಲ್ಲ. ಯಾತಕ್ಕೆಂದರೆ 'ನಾಮ ರೂಪೇಣವ್ಯಾಕರವಾಣಿ ಎಂಬ ವಾಕ್ಯದಲ್ಲಿ ಸಮಸ್ತ ಶಬ್ದಗಳೂ ಅಚೇತನವಸ್ತುಗಳು, ಜೀವರು ಇವುಗಳಿಂದ ಕೂಡಿಕೊಂಡಿರುವ ಪರಬ್ರಹ್ಮವನ್ನೇ ಹೇಳುವುವು, ಎಂಬುವುದು ಸ್ಪಷ್ಟವು ಅವುಗಳಲ್ಲಿ ಪ್ರಧಾನವಾಗಿರುವ ಬ್ರಹ್ಮವು ಪ್ರತ್ಯಕ್ಷಾದಿ ಪ್ರಮಾಣಗಳಿಂದ ತಿಳಿಯುವುದಕ್ಕಾಗುವುದಿಲ್ಲವಾದ್ದರಿಂದ ಲೌಕಿಕ ಮಾನವರೆಲ್ಲರೂ ಶಬ್ದವನ್ನು ಉಪಯೋಗಿಸುವ ಕಾಲದಲ್ಲಿ ಆ ಶಬ್ದದಿಂದ ನಿರ್ದೇಶಿಸಲ್ಪಡುವ ಅರ್ಥಗಳಲ್ಲಿ ಏಕದೇಶವಾಗಿ (ಅಪ್ರಧಾನವಾಗಿ) ಇರುವ ವಸ್ತುವಿನಲ್ಲೇ, ಎಂದರ ಅಚೇತನ ವಸ್ತುಗಳು ಮತ್ತು ಜೀವ ಇವುಗಳಲ್ಲೇ ಆ ಶಬ್ದವು ಮುಗಿದು ಹೋಗುವುದು ಎಂದು ತಿಳಿಯುವರು ಆ ವ್ಯುತ್ಪತ್ತಿಯ ಪೂರ್ಣತೆಯು ವೇದಾಂತ ಶಾಸ್ತ್ರವನ್ನು ತಿಳಿಯುವುದರಿಂದಲೇ ಅರಿವಾಗುವುದಲ್ಲವೇ.! ಹೀಗೆಯೇ ವೇದದಲ್ಲಿ ಕಂಡು ಬರುವ ಶಬ್ದಗಳೆಲ್ಲವೂ ತಮ್ಮ ತಮ್ಮ ಅರ್ಥಗಳನ್ನು ಪರಮಾತ್ಮ ಪರ್ಯಂತಗಳೆಂಬದಾಗಿ ತಿಳಿಯಪಡಿಸುವುವು.

ಆದರೆ ಎಲ್ಲಾ ಶಬ್ದಗಳೂ ಬ್ರಹ್ಮಪರ್ಯಂತವಾಗಿಯೇ ಸೂಚಿಸುವುವು ಎಂದು ಹೇಳಿದರೆ ಅವುಗಳ ವ್ಯುತ್ಪತ್ತಿಯು ಬ್ರಹ್ಮದವರೆಗೂ ಹೋಗಬೇಕಲ್ಲವೇ? ಹಾಗೆ ವ್ಯುತ್ಪತ್ತಿಯನ್ನು ಹೇಳದೆ ಲೋಕದಲ್ಲಿ ಒಂದೊಂದು ಪದಾರ್ಥಕ್ಕೂ ಆಯಾಯು ಪದಾರ್ಥಗಳವರೆಗ ಮಾತ್ರವೇ ವ್ಯುತ್ಪತ್ತಿಯನ್ನು ಹೇಳುವರಲ್ಲಾ! ಅದು ಬಾಧಿತವಾಗುವುದಿಲ್ಲವೋ ? ಎಂದು ಶಂಕಿಸಬಹುದು. ಅದು ಹಾಗಾಗುವುದಿಲ್ಲ ಎಲ್ಲಾ ಪದಾರ್ಥಗಳೂ ಬ್ರಹ್ಮವೆಂಬ ಒಂದೇ ಶಬ್ದವು, ಎಂದು ಹೇಳಿದಾಗಲಲ್ಲವೇ ಆ ಆಕ್ಷೇಪಕ್ಕೆ

ಅವಕಾಶವಾಗುವುದು ಅದು ನಮ್ಮ ಸಿದ್ಧಾಂತವಲ್ಲ ನಮ್ಮ ಸಿದ್ಧಾಂತರೀತ್ಯಾ ಒಂದೊಂದು ಶಬ್ದಕ್ಕೂ ವಾಚ್ಯದಲ್ಲಿ ಅನೇಕ ಅರ್ಥಗಳುಂಟು. ಪ್ರಸಿದ್ಧವಾಗಿ ಆಯಾ ಶಬ್ದಗಳಿಂದ ನಿರ್ದೇಶಿಸಲ್ಪಡುವ ವಸ್ತುಗಳು ಅವುಗಳಲ್ಲಿ ಒಂದು ಅಂಶವು ಆಯಾ ಪದಾರ್ಥಗಳೊಳಗಿರುವ ಜೀವಾತ್ಮವು ಮತ್ತೊಂದು ಅಂಶವು. ಆಯಾ ಜೀವಾತ್ಮರುಗಳೊಳಗೆ ಅನುಪ್ರವೇಶಿಸಿರುವ ಬ್ರಹ್ಮವು ಇನ್ನೊಂದು ಅಂಶವು ಅದರಿಂದ ಒಂದೊಂದು ಶಬ್ದಕ್ಕೂ ಅದರದರ ಪ್ರಸಿದ್ಧವಾದ ಅರ್ಥವನ್ನು ಹೇಳುವ ವ್ಯುತ್ಪತ್ತಿಯು ಬಾಧಿತವಾಗುವುದಿಲ್ಲ. ಆದರೆ ಅದು ಏಕದೇಶವ್ಯುತ್ಪತ್ತಿಯು ಈ ವ್ಯುತ್ಪತ್ತಿಯನ್ನು ಸ್ವೀಕರಿಸಿ ವೇದಾಂತಶ್ರವಣವನ್ನು ಮಾಡುವುದಕ್ಕೆ ಆರಂಭಿಸಿದರೆ ಆವೇದಾಂತ ಶ್ರವಣದಿಂದ ವ್ಯುತ್ಪತ್ತಿಯು ಪೂರ್ಣವಾಗುವುದು ಇದೇ ವಸ್ತುಸ್ಥಿತಿಯು ಪರಮಾತ್ಮನು ಶಾಸ್ತ್ರವೆಂಬ ಆ ಒಂದು ಪ್ರಮಾಣದಿಂದಲೇ ಅರಿಯಲ್ಪಡುವವನಾದ್ದರಿಂದ ಪ್ರತ್ಯಕ್ಷ ಮುಂತಾದ ಪ್ರಮಾಣಗಳನ್ನೇ ಅವಲಂಬಿಸಿರುವ ಲೌಕಿಕರುಗಳು ಆ ಬ್ರಹ್ಮಪರ್ಯಂತವಾದ ವ್ಯುತ್ಪತ್ತಿಯನ್ನು ತಿಳಿಯುವುದಿಲ್ಲ.

**ಈ ಶರೀರಿ ಶರೀರ ಜ್ಞಾನದಿಂದ ತಿಳಿದುಬರುವ ಕೆಲವು ವಿಶೇಷ ವಿಷಯಗಳು :**

ಪರಮಾತ್ಮನಿಗೂ ಚಿದಚಿತ್ತುಗಳಿಗೂ ಇರುವ ಶರೀರಿ ಶರೀರ ಸಂಬಂಧವನ್ನು ವಿವರಿಸುವಾಗ ಶರೀರವೆಂಬುವುದು ಶರೀರಿಗೆ ( ಎಂದರ ಆತ್ಮಕ್ಕೆ ) ನಿಯಮೇನ ಧಾರ್ಯವಾಗಿಯೂ, ನಿಯಮೇನ ನಿಯಾಮ್ಯವಾಗಿಯೂ ನಿಯಮೇನ ಶೇಷವಾಗಿಯೂ ಇರುವುದು ಎಂದು ಹೇಳಲ್ಪಟ್ಟಿತು ಈ ಸಂಬಂಧದ ವಿಶೇಷಾರ್ಥಗಳು ಸ್ವಲ್ಪಮಟ್ಟಿಗೆ ಇಲ್ಲಿ ವಿಮರ್ಶಿಸಲ್ಪಡುವುವು.

**1. ನಿಯಮೇನ ಧಾರ್ಯವು :**—ಎಂಬುವುದರಿಂದ ಈ ಚರಾಚರಗಳೆಲ್ಲವೂ ಪರಮಾತ್ಮನಿಂದ ಧರಿಸಲ್ಪಟ್ಟಿವೆ ಎಂದು ಅರ್ಥವಾಗುವುದು ಒಂದು ಪಾತ್ರೆಯಲ್ಲಿರುವ ನೀರನ್ನು ಆ ಪಾತ್ರೆಯು ಧರಿಸುವಂತೆ ಪರಮಾತ್ಮನು ಜಗತ್ತೆಲ್ಲವನ್ನು ತನ್ನ ಮೇಲೆ ಹೊತ್ತುಕೊಂಡಿರುವವನು ಎಂದು ಅರ್ಥವಲ್ಲ "ದ್ಯೌಸ್ಸಚಂದ್ರಾರ್ಕ ನಕ್ಷತ್ರಖಂದಿಶೌಭೂರ್ಮಹೋದಧಿಃ ವಾಸುದೇವಸ್ಯ ವೀರ್ಯೇಣ ವಿಧೃತಾನಿ ಮಹಾತ್ಮನಃ" ಎಂದು ವಿಷ್ಣುಸಹಸ್ರನಾಮಾಧ್ಯಾಯದಲ್ಲಿ ಹೇಳಿರುವುದು ಒಂದು ಕೆರೆಯನ್ನೋ ಅಥವಾ ಸಮುದ್ರವನ್ನೋ ನೋಡುವಾಗ ಅವುಗಳಲ್ಲಿ ನೀರು ಒಂದು ದೊಡ್ಡ ಪಾತ್ರೆಯಲ್ಲಿರುವಂತೆ ಆಧಾರಾಧೇಯಭಾವವು ಮನಸ್ಸಿಗೆ ತೋರುವುದು ಒಂದು ಕಲ್ಲನ್ನು ನಮ್ಮ ಕೈಯಲ್ಲಿಟ್ಟುಕೊಂಡಾಗ ಆ ಕಲ್ಲು ಕೈಯಿನ ಆಧಾರವನ್ನು ಪಡೆದಿರುವುದು ಆ ಕಲ್ಲನ್ನು ಬಿಟ್ಟುಬಿಟ್ಟರೆ ಅದು ಕೆಳಕ್ಕೆ ಬಿದ್ದು ಭೂಮಿಯ ಆಧಾರವನ್ನು ಪಡೆಯು

ವುದು ಇದು ಒಂದು ವಿಧವಾದ ಆಧಾರಾಧೇಯಭಾವವು ಭೂಮಿಯು ಸುತ್ತು ತ್ತಿರುವಾಗ ಮೊದಲು ಮೇಲ್ಮುಖವಾಗಿದ್ದ ವಸ್ತುಗಳೆಲ್ಲಾ ಒಂದು ಕಾಲಕ್ಕೆ ಕೆಳಮುಖ ವಾಗುವುವು ಆದಾಗ್ಯೂ ಅವು ಭೂಮಿಯ ಆಧಾರವನ್ನು ಬಿಡದೆ ಭೂಮಿಗೇ ಅಂಟಿ ಕೊಂಡಿರುವಂತೆ ತೋರುತ್ತದೆ ಈ ಶಕ್ತಿಯನ್ನು ಭೂಮಿಯ ಆಕರ್ಷಣಾಶಕ್ತಿ ( Earths Gravitation ) ಎನ್ನುವೆವು ಈ ಭೂಮಿಯಾಗಲಿ, ಸೂರ್ಯ, ಚಂದ್ರ, ನಕ್ಷತ್ರಾದಿಗಳಾಗಲಿ ನಾವು ಭೂಮಿಯ ಮೇಲೆ ನಿಂತಿರುವಂತೆ ಯಾವುದರ ಮೇಲೆಯೂ ನಿಂತಿಲ್ಲ ಅವು ಪರಮಾತ್ಮನ ಸಂಕಲ್ಪಶಕ್ತಿಯಿಂದ ಅವನಿಂದ ನಿಯಮಿತ ವಾದ ಸ್ಥಾನಗಳಲ್ಲಿ ಇದ್ದು ನಿಯಮಿತವಾದ ಮಾರ್ಗದಲ್ಲಿ ಸಂಚರಿಸುತ್ತಿರುವುವು ಈ ಶಕ್ತಿಯನ್ನು ಗುರುತ್ವಾಕರ್ಷಣೆ ( Universal Gravitation ) ಎನ್ನುವವು ಈ ಶಕ್ತಿಯು ಎಲ್ಲಿಂದ ಬಂದಿತು ಎಂದು ಯಾರೂ ಕಾಣರು ಶಾಸ್ತ್ರಗಳ ಪ್ರಮಾಣ ದಿಂದ ಇವನ್ನು ಪರಮಾತ್ಮನ ಸಂಕಲ್ಪಶಕ್ತಿಯನ್ನುವರು ಇದು ಪರಮಾತ್ಮನಿಗೂ ಚಿದಚಿತ್ತುಗಳಿಗೂ ಇರುವ ಶರೀರಿ ಶರೀರ ಸಂಬಂಧದ ಆಧಾರಾಧೇಯ ಭಾವದಿಂದ ಉಂಟಾಯಿತು ಎಂದು ತಿಳಿಯಬೇಕು,

ಅನೇಕ ಅಣುಗಳು ( atom's ) ಸೇರಿ ಒಂದು ಸಣ್ಣ ಪದಾರ್ಥದ ಕಣ ( Molecule ) ವಾಗುವುವೆಂದು ನಾವು ಅರಿಯುವವು ಈ ಪದಾರ್ಥದಲ್ಲಿರುವ ಕಣಗಳು ಒಂದಕ್ಕೊಂದು ಸೇರುವಿಕೆಯೇ ಒಂದು ಶಕ್ತಿ ವಿಶೇಷವು ಆದರೆ ಅದಕ್ಕಿಂ ತಲೂ ವಿಶೇಷವೆಂದರೆ ಈ ಅಣುಗಳೊಂದೊಂದರಲ್ಲಿಯೂ ಸೇರಿಕೊಂಡಿರುವ ಪರ ಮಾಣುಗಳ ಶಕ್ತಿ ವಿಶೇಷವು. ಈ ಶಕ್ತಿಯ ಮಹತ್ವವು ಈಗೀಗ ಆಟಂಬಾಂಬು ( atom bombs ) ಗಳ ಸ್ಫೋಟನದ ನಂತರ ಪ್ರಪಂಚಕ್ಕೆ ಅರಿವಾಗಿದೆ ಸೂಕ್ಷ್ಮ ದೃಷ್ಟಿಯುಳ್ಳವರಿಗೆ ಈ ಶಕ್ತಿಯು ಪರಮಾತ್ಮನ ಶರೀರಿ ಶರೀರ ಸಂಬಂಧದ ಆಧಾರಾ ಧೇಯ ಸಂಬಂಧಕ್ಕೆ ಸಂಬಂಧಿಸಿದುದಾಗಿ ಅರಿವಾಗುವುದು ಇದನ್ನು ಆಟಾಮಿಕ್ ಎನೆರ್ಜಿ ( atomic energy ) ಎನ್ನುವರು

ಗಾಳಿಗಿಂತಲೂ ಹಗುರವಾದ ಪದಾರ್ಥಗಳು ಆಕಾಶದಲ್ಲಿ ತೇಲುವಾಗ ಅವು ಗಾಳಿಯ ಆಧಾರದಿಂದ ಆಕಾಶದಲ್ಲಿರುವುವು ಈ ಸಮಸ್ತ ಜಗತ್ತುಗಳೂ ಅವುಗಳಲ್ಲಿ ರುವ ಸ್ಥಾವರಜಂಗಮಗಳೊಡನೆ ಗಾಳಿಯಲ್ಲಿ ತೇಲುತ್ತಿರುವ ಪದಾರ್ಥಗಳಂತೆ ಪರ ಬ್ರಹ್ಮನ ಆಧಾರವನ್ನು ಪಡೆದು ಆಕಾಶದಲ್ಲಿ ನಿಂತು ಚಲಿಸುತ್ತಿರುವುವು

ಈ ತರ್ಕದಿಂದ ಪರಮಾತ್ಮನು ' ವಿಭು ' ಎಂದರೆ ಸರ್ವವ್ಯಾಪಿಯೆಂಬ ಭಾವವು ನಮಗೆ ಮೂಡುವುದು. ಅಣು, ರೇಣು, ತೃಣಾದಿಗಳಲ್ಲೆಲ್ಲಾ ಅಂತರ್ಯಾಮಿ

ಯಾಗಿದ್ದು ಎಲ್ಲವನ್ನೂ ಧರಿಸಿರುವುದರಿಂದ ಅವನಿಲ್ಲದ ಸ್ಥಳವೇ ಇಲ್ಲವೆಂದಾಗುವುದು ಒಂದು ಪಾತ್ರೆಯಲ್ಲಿರುವ ಹಾಲಿನ ಒಂದೊಂದು ಕಣದಲ್ಲಿಯೂ ಬೆಣ್ಣೆಯಿರುವಂತೆ ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಪರಮಾತ್ಮನಿರುವನು ಹಾಲಿನಲ್ಲಿರುವ ಬೆಣ್ಣೆಯನ್ನು ತೆಗೆಯುವುದಕ್ಕೆ ಕಾಯಿಸುವುದು, ಹೆಪ್ಪುಹಾಕುವುದು, ಕಡೆಯುವುದು ಮುಂತಾದ ಸಾಧನಗಳಿರುವಂತೆ ಪ್ರಪಂಚದಲ್ಲಿ ಎಲ್ಲೆಲ್ಲಿಯೂ ತುಂಬಿರುವ ಪರಮಾತ್ಮನನ್ನು ಸಾಕ್ಷಾತ್ಕರಿಸುವುದಕ್ಕೆ ಜ್ಞಾನ, ಭಕ್ತಿ, ತಪಸ್ಸು, ಯೋಗ ಇತ್ಯಾದಿ ಸಾಧನಗಳ ಅವಶ್ಯಕತೆಯನ್ನು ಮಹರ್ಷಿಗಳು ತಮ್ಮ ಅನುಭವದಿಂದ ಕಂಡಿರುವರು ಪ್ರಹ್ಲಾದನು ತನ್ನ ಜ್ಞಾನದ ಮಹಾತ್ಮ್ಯದಿಂದ ಎಲ್ಲೆಲ್ಲಿಯೂ ಪರಮಾತ್ಮನನ್ನು ಕಾಣುತ್ತಿದ್ದನು

ಈ ಆಧಾರವೆಂಬ ಪದವು ಬೇರೊಂದು ವಿಧದಲ್ಲಿಯೂ ಪ್ರಯೋಗದಲ್ಲಿರುವುದು ನಾವು ಮಾಡುವ ನಿತ್ಯನೈಮಿತ್ತಿಕಾದಿ ಕರ್ಮಗಳಿಗೆಲ್ಲಾ ಶಾಸ್ತ್ರವು ಆಧಾರವೆಂದು ಹೇಳುವೆವು ಬ್ರಹ್ಮಜ್ಞಾನಕ್ಕೂ ಶಾಸ್ತ್ರವೇ ಆಧಾರವೆನಿಸುವುದು ಧರ್ಮವನ್ನೇ ತನ್ನ ಆಧಾರವನ್ನಾಗಿ ಇಟ್ಟುಕೊಂಡು ಸತ್ಯಪರನಾಗಿದ್ದ ಹರಿಶ್ಚಂದ್ರನು ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡನು ಪ್ರಪನ್ನನಿಗೆ ಮುಖ್ಯವಾಗಿ ಅನುಷ್ಠೇಯವಾದ ಶರಣಾಗತಿ ಶಾಸ್ತ್ರದಲ್ಲಿ “ ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ । ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ” ( ಭ ಗೀ 18 – 62 ) ಎಂಬ ಭಗವದ್ಗೀತಾ ಶ್ಲೋಕದಲ್ಲಿ “ ಮಾಮೇಕಂ ಶರಣಂ ವ್ರಜ ” ಎಂಬುವುದಕ್ಕೆ “ ನನ್ನನ್ನೇ ನಿನಗೆ ಸರ್ವಸ್ವವನ್ನಾಗಿ ಅಂಗೀಕರಿಸು ” ಎಂದು ಅರ್ಥವಾಗುವುದು ಇದರ ಸರಿಯಾದ ಅರ್ಥವು ‘ ನಾನೇ ನಿನಗೆ ಸರ್ವ ವಿಧದಲ್ಲಿಯೂ ಧಾರಕನು ಎಂಬುವುದನ್ನು ನಿನ್ನ ವಿವೇಕದಿಂದ ತಿಳಿದು ನಿನ್ನ ಸಮಸ್ತ ಭಾರವನ್ನೂ ನನ್ನ ಮೇಲೆಯೇ ಹಾಕಿ ನನ್ನ ವಿನಾ ಇತರ ವಿಷಯಗಳಲ್ಲಿ ವಿರಕ್ತಿಯನ್ನು ಹೊಂದಿ ನಿಶ್ಚಿಂತೆಯಿಂದ ಇರು ’ ಎಂದು ಹೇಳಿದಂತಾಗುವುದು ಇದು ಪರಮಾತ್ಮನಿಗೂ ಜೀವಾತ್ಮನಿಗೂ ಇರುವ ಶರೀರಿ ಶರೀರ ಸಂಬಂಧದ ಆಧಾರಾಧೇಯ ಭಾವದ ಒಂದು ವಿಧವಾದ ಅನುಷ್ಠಾನವು ಈ ಭಾವವು ಜೀವಾತ್ಮನ ಮುಕ್ತಿಗೆ ಕಾರಣವಾಗುವುದು

**2. ಇನ್ನು ಎರಡನೆಯದಾದ ನಿಯಂತೃ ನಿಯಾಮ್ಯ ಭಾವವನ್ನು ವಿಮರ್ಶಿಸೋಣ.** –ಪರಮಾತ್ಮನಿಗೆ ಸ್ವಾಭಾವಿಕವಾಗಿಯೇ ಸಮಸ್ತ ಚರಾಚರಗಳನ್ನೂ ತನ್ನ ಸಂಕಲ್ಪರೀತ್ಯಾ ನಿಯಮಿಸುವ ಸಾಮರ್ಥ್ಯವಿರುವುದು. ಪರಮಾತ್ಮನ ಈ ನಿಯಮನ ಸಾಮರ್ಥ್ಯವು ಯಾವ ರೀತಿಯಲ್ಲಿ ಜೀವರುಗಳ ಮೇಲೆ ಕಾರ್ಯಮಾಡುವುದೆಂಬುದನ್ನು ನೋಡೋಣ ಮನುಷ್ಯನ ಪ್ರಯತ್ನಗಳೆಲ್ಲವೂ ಅವನ ಮನಸ್ಸು,

ಬುದ್ಧಿ ಇವುಗಳ ಸಾಮರ್ಥ್ಯದಿಂದ ರೂಪುಗೊಳ್ಳುವುವು ಹಾಗೆ ರೂಪಿತವಾದವುಗಳನ್ನು ಇಂದ್ರಿಯಗಳ ಸಾಮರ್ಥ್ಯದಿಂದ ಸಾಧಿಸಲು ಪ್ರಯತ್ನಿಸುವನು "ಸರ್ವಸ್ಯ ಚಾಹಂ ಹೃದಿ ಸನ್ನಿ ವಿಷ್ಟೋ ಮತ್ತ ಸ್ಮೃತಿ ಜ್ಞಾನ ಪೋಹನಂಚ" ಎಂಬ ಗೀತಾ ವಾಕ್ಯ ರೀತ್ಯಾ ಮನಸ್ಸು, ಬುದ್ಧಿ ಇವುಗಳ ಶಕ್ತಿಯೂ ಪರಮಾತ್ಮನ ಅಧೀನವಾಗಿರುವುವು ಇವುಗಳೊಡನೆ ಜೀವಾತ್ಮನನ್ನು ನಿಯಮಿಸುವ ಶಕ್ತಿಯು ಪರಮಾತ್ಮನ ಅಧೀನವಾಗಿರುವುದು ಇವುಗಳೊಡನೆ ಜೀವಾತ್ಮನನ್ನೂ ನಿಯಮಿಸುವ ಶಕ್ತಿಯು ಪರಮಾತ್ಮನಿಗಿರುವುದಾಗಿ "ಯ ಆತ್ಮನಿ ತಿಷ್ಠನ್ " ಎಂಬ ಶ್ರುತಿವಾಕ್ಯದಲ್ಲಿ ವಿವರಿಸಿರುವುದು ಇದರಿಂದಾಗಿ ಪರಮಾತ್ಮನ ಸಂಕಲ್ಪವನ್ನು ಮೀರಿ ಜೀವಾತ್ಮನು ಸ್ವತಂತ್ರಿಸಿ ಹೋಗುವಂತೆಯೇ ಇಲ್ಲ. ಪರಮಾತ್ಮನು ಅನುಗ್ರಹಿಸಿರುವ ಶಾಸ್ತ್ರಕ್ರಮವನ್ನು ಮೀರಿ ತನ್ನ ಕರ್ಮಾನುಗುಣವಾದ ಅಜ್ಞಾನದಿಂದ ಜೀವನು ದುರ್ಮಾರ್ಗಕ್ಕೆ ಪ್ರವರ್ತಿಸುವಾಗಲೂ, ಪರಮಾತ್ಮನಿಗೆ ಅವುಗಳನ್ನು ತಡೆಯಲು ಶಕ್ತಿಯಿದ್ದಾಗ್ಯೂ. ಜೀವನು ಅವನವನ ಕರ್ಮಾನುಗುಣವಾಗಿ ದುಷ್ಫಲಗಳನ್ನು ಅನುಭವಿಸಲೆಂಬದಾಗಿಯೇ ಆ ಕಾಲಗಳಲ್ಲಿ ಪರಮಾತ್ಮನು ಉದಾಸೀನನಾಗಿದ್ದು ಅನುಮತಿ ದಾನವನ್ನು ಮಾಡುವನು ಎಂಬದಾಗಿ ಸೂಕ್ಷ್ಮದರ್ಶಿಗಳಾದ ಜ್ಞಾನಿಗಳು ಹೇಳಿರುವರು ಪರಮಾತ್ಮನ ಈ ವಿಧವಾದ ನಿಯಮನ ಸಾಮರ್ಥ್ಯವು ಸಮಸ್ತವಾದ ಚರಾಚರಗಳಲ್ಲಿಯೂ ಇರುವುದರಿಂದ ಪ್ರತಿಯೊಬ್ಬ ಜೀವಿಯೂ ಅವನವನು ಮಾಡುವ ಪ್ರಯತ್ನಗಳಲ್ಲಿ ಪರಮಾತ್ಮನ ಸಂಕಲ್ಪದಂತೆ ಇತರ ಜೀವರುಗಳು ಸಹಾಯಕಾರಿಗಳಾಗಿಯೋ ಅಥವಾ ವಿಘ್ನಕಾರಿಗಳಾಗಿಯೋ ಅಥವಾ ಮಿತ್ರರಾಗಿಯೋ ಅಥವಾ ಶತ್ರುಗಳಾಗಿಯೋ ಇದ್ದು ಅವುಗಳ ಶುಭಾಶುಭ ಫಲಗಳನ್ನು ಪಡೆಯುವನು, ಈ ಪ್ರಯತ್ನಗಳು ಮತ್ತು ಅವುಗಳ ಫಲ ಇವುಗಳೆಲ್ಲವೂ ಆಯಾ ಜೀವರುಗಳ ಕರ್ಮವನ್ನು ಅನುಸರಿಸಿರುವುವು ಇವುಗಳೆಲ್ಲದರ ಹಿಂದೆಯೂ ಭಗವತ್ಸಂಕಲ್ಪವೂ ತದನುಗುಣವಾದ ಅವನ ನಿಯಮನ ಸಾಮರ್ಥ್ಯವೂ ಕಾರ್ಯಮಾಡುತ್ತಿರುವುವು

ಪರಮಾತ್ಮನ ಈ ನಿಯತ ನಿಯಮನ ಭಾವವನ್ನು ಅರಿತ ಪ್ರಪನ್ನರು ಶಾಸ್ತ್ರಗಳಿಗೆ ವಿರೋಧವಿಲ್ಲದಂತೆ ತಮ್ಮ ವಿಹಿತ ಕರ್ಮಾನುಷ್ಠಾನಗಳನ್ನು ನಡೆಸುತ್ತಾ, ತಮ್ಮ ಕಾರ್ಯಗಳಲ್ಲಿ ಕರ್ತೃತ್ವ ಮತ್ತು ಫಲಸಂಗಗಳನ್ನು ತ್ಯಜಿಸಿ ಸಮಸ್ತಕ್ಕೂ ಧಾರಕನಾದ ಪರಮಾತ್ಮನ ಮೇಲೆ ತಮ್ಮ ಭರಸಮರ್ಪಣೆಯನ್ನು ಮಾಡುವರು ಇದು ಆ ಪ್ರಪನ್ನರ ಮುಕ್ತಿಗೆ ಮಾರ್ಗವಾಗುವುದು

ಇಲ್ಲಿ ಕರ್ತೃತ್ವದ ತ್ಯಾಗವು ಹೇಗೆ ಶರೀರಿ ಶರೀರ ಸಂಬಂಧದಲ್ಲಿ ಸೇರುವುದು ಎಂದು ಶಂಕಿಸಬಹುದು. "ಇಂದ್ರಿಯಾಣಾಂ ಮನೋಬುದ್ಧಿ ಸತ್ತ್ವಂ ತೇಜೋ

ಬಲಂ ಧೃತಿಃ ವಾಸುದೇವಾತ್ಮ ಕನ್ಯಾಹುಃ ಕ್ಷೇತ್ರಂ ಕ್ಷೇತ್ರಜ್ಞ ಏವಚ ಎಂಬ ಸಹಸ್ರನಾಮಾಧ್ಯಾಯ ಶ್ಲೋಕರೀತ್ಯಾ ಇಂದ್ರಿಯಗಳು, ಮನಸ್ಸು, ಬುದ್ಧಿ, ತೇಜಸ್ಸು ಬಲ, ಧೃತಿ ಇತ್ಯಾದಿಗಳೆಲ್ಲವೂ ಪರಮಾತ್ಮನ ಸ್ವತ್ತೇ ಆಗಿದ್ದು ಅವನ ಶರೀರಗಳಾಗಿರುವುವು ಪರಮಾತ್ಮನ ಸ್ವತ್ತೇ ಆಗಿ ಆ ಪರಮಾತ್ಮನ ಸಂಕಲ್ಪಕ್ಕೆ ಅಧೀನನಾಗಿ ಜೀವಾತ್ಮನು ಆ ಇಂದ್ರಿಯಗಳು, ಮನಸ್ಸು ಬುದ್ಧಿ ಇತ್ಯಾದಿಗಳಿಂದ ಮಾಡಲ್ಪಡುವ ಕಾರ್ಯಗಳಿಗೆ ತಾನೇ ಸ್ವತಂತ್ರ ಕರ್ತಾ ಎಂದು ತಿಳಿಯುವುದು ಅಜ್ಞಾನದ ಕಾರ್ಯವಾಗುವುದಲ್ಲವೇ ಇದರಿಂದಾಗಿ ಕರ್ತೃತ್ವವು ಜೀವಾತ್ಮನಿಗೆ ಸೇರಲಾರದು ಈ ಜ್ಞಾನವನ್ನು ಹೊಂದಿದವನು ಕಾರ್ಯಗಳ ಕರ್ತೃತ್ವವನ್ನು ತನ್ನದಲ್ಲವೆಂದು ತ್ಯಾಗಮಾಡಿ ಅದು ಭಗವದಧೀನವೆಂದು ತಿಳಿಯುವನು ಈ ಭಾವವು ಮುಕ್ತಿಗೆ ಹೇತುವಾಗುವುದು ಆದ್ದರಿಂದ ಈ ಕರ್ತೃತ್ವ ತ್ಯಾಗವು ಶರೀರಿ ಶರೀರ ಸಂಬಂಧ ರೀತ್ಯಾ ಸಮಂಜಸವಾಗುವುದು

ಇನ್ನು ಮೂರನೆಯದಾದ ಶೇಷಶೇಷಿ ಸಂಬಂಧವು ಸ್ಪಷ್ಟವೇ ಜೀವಾತ್ಮನ ಸತ್ತೇ ( ಎಂದರೆ ಇರುವಿಕೆಯೇ, the very existence ) ಪರಮಾತ್ಮನ ಅಂತರ್ಯಾಮಿತ್ವದಿಂದಾಗಿರುವುದು, ಮತ್ತು ಆ ಜೀವಾತ್ಮನಿಗಾಗಿ ಅನುಗ್ರಹಿಸಿರುವ ಶರೀರದಲ್ಲಿರುವ ಮನಸ್ಸು, ಬುದ್ಧಿ, ಇಂದ್ರಿಯಗಳು ಪ್ರಕೃತಿವಿಕಾರವಾದ ಸ್ಥೂಲ ಶರೀರ ಇವೆಲ್ಲವೂ ಪರಮಾತ್ಮನ ಶರೀರಗಳಾಗಿ ಅವನ ಸ್ವತ್ತೇ ಆಗಿರುವಾಗ ಮನುಷ್ಯನು ಸಂಪೂರ್ಣವಾಗಿ ಪರಮಾತ್ಮನಿಗೆ ಶೇಷಿಯಾಗಿರುವನು ಎಂಬುವುದು ಶಾಸ್ತ್ರಸಿದ್ಧವು,

ಹೀಗಿದ್ದರೂ ಮನುಷ್ಯನು ತಾನು ಸ್ವತಂತ್ರನು, ಎಲ್ಲವೂ ತನ್ನಿಂದಲೇ ಆಗುವುವು ಎಂದು ತಿಳಿಯುವನಲ್ಲಾ ಅದಕ್ಕೆ ಕಾರಣವೇನು ? ಎಂದರೆ ಕರ್ಮಮೂಲವಾದ ಅಜ್ಞಾನವೇ ಈ ತಪ್ಪು ತಿಳುವಳಿಕೆಗೆ ಕಾರಣವು "ಅಹಂಕಾರ ವಿಮೂಢಾತ್ಮಾ ಕರ್ತಾಹ ಮಿತಿ ಮನ್ಯತೇ " ( ಭ ಗೀ 3 – 27 ) ಎಂದು ಅಂಥವನನ್ನು, ಅಹಂಕಾರದಿಂದ ಕೂಡಿದ ಮೂಢಾತ್ಮನು ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ನಿರ್ದೇಶಿಸಿರುವನು ನೀರನ್ನು ಬೆಂಕಿಯ ಮೇಲೆ ಸುರಿದರೆ ಅದು ಬೆಂಕಿಯನ್ನು ಆರಿಸಿಬಿಡುವ ಸಾಮರ್ಥ್ಯವುಳ್ಳದ್ದಾದಾಗ್ಯೂ ಅದೇ ನೀರನ್ನು ಒಂದು ಪಾತ್ರೆಯಲ್ಲಿ ಹಾಕಿ ಅದನ್ನು ಬೆಂಕಿಯ ಮೇಲೆ ಇಟ್ಟರೆ ಬೆಂಕಿಯ ಸಾಮರ್ಥ್ಯದಿಂದ ಆ ನೀರು ಕಾಯ್ದು ಕುದಿದು ಆವಿಯಾಗಿ ಬಿಡುವುದು, ನೀರು ತನ್ನ ಸಹಜವಾದ ಶಾಂತ ಶೀತಳ ಸ್ವಭಾವವನ್ನು ಕಳೆದುಕೊಳ್ಳುವುದು ಅದೇ ರೀತಿಯಲ್ಲಿ ಪ್ರಕೃತಿ ಸಂಬಂಧದಲ್ಲಿ ಇಡಲ್ಪಟ್ಟ ಜೀವಾ

ತ್ಮನು ಸ್ವಲ್ಪ ಸ್ವಲ್ಪವಾಗಿ ಆ ಪ್ರಕೃತಿಯ ಗುಣಗಳಿಂದ ಆವರಿಸಲ್ಪಟ್ಟವನಾಗಿ ಅಹಂಕಾರ, ಮಮಕಾರಗಳನ್ನೂ, ಪ್ರಕೃತಿಯ ವಿಕಾರಗಳಾದ ವಿಷಯಗಳಲ್ಲಿ ಅಭಿಲಾಷೆಯನ್ನೂ ತನ್ನಲ್ಲಿ ಹೊಂದಿ ಫಲಾಭಿಸಂಧಿಯುಕ್ತವಾದ ಸತ್ಕರ್ಮ ದುಷ್ಕರ್ಮಗಳಲ್ಲಿ ಪ್ರವರ್ತಿಸಿ ಕರ್ಮವನ್ನು ಬೆಳೆಸಿಕೊಳ್ಳುತ್ತಾನೆ ಈ ಕರ್ಮಗಳ ಫಲವಾಗಿ ಅಜ್ಞಾನಾಭಿವೃದ್ಧಿ ಮತ್ತು ಪುನರ್ಜನ್ಮಗಳುಂಟಾಗುವುವು ಹೀಗಾಗಿ ಆ ಜೀವನು ಶಾಶ್ವತವಾಗಿ ಸಂಸಾರ ಚಕ್ರದಲ್ಲಿ ಸಿಕ್ಕಿಕೊಂಡು ಅಲೆಯುತ್ತಿರುವನು ಹೀಗೆ ತೊಳಲುತ್ತಿರುವ ಜೀವನಿಗೆ ಸತ್ಸಹವಾಸದಿಂದ ಸ್ವಲ್ಪ ಸ್ವಲ್ಪವಾಗಿ ಜ್ಞಾನೋದಯವಾಗಿ ತತ್ತ್ವಜ್ಞಾನವು ಅಭಿವೃದ್ಧಿಯಾದರೆ ಆಗ ಭಗವತ್ಕೃಪೆಯಿಂದ ಬ್ರಹ್ಮಜ್ಞಾನವನ್ನು ಪಡೆದು ಮುಕ್ತಿಮಾರ್ಗವನ್ನು ಅನುಸರಿಸುವನು ತಾನು ಪರಮಾತ್ಮನಿಗೆ ಶೇಷನೆಂಬ ಭಾವವುಂಟಾಗಿ ಪ್ರಪತ್ತಿಯನ್ನು ಅನುಷ್ಠಿಸಿದಾಗ ಅವನು ಉತ್ತೀರ್ಣನಾಗುವನು

ಈ ಶೇಷತ್ವಾನುಸಂಧಾನದಿಂದ ಪ್ರಪನ್ನನು ಮಾಡುವ ಕರ್ಮಗಳೆಲ್ಲವೂ ಪರಮಾತ್ಮನ ಕೈಂಕರ್ಯವೆನಿಸುವುವು ಈ ಅನುಸಂಧಾನವಿಲ್ಲದೆ ಫಲವನ್ನಪೇಕ್ಷಿಸಿ ಮಾಡುವ ಕರ್ಮಗಳು, ಆ ಕರ್ಮಗಳಿಗೆ ಫಲವನ್ನು ಅನುಭವಿಸಿಯೇ ತೀರಬೇಕಾದ್ದರಿಂದ, ಪುನರ್ಜನ್ಮಗಳಿಗೆ ಕಾರಣವಾಗುವುವು ಆದ್ದರಿಂದ ಮುಮುಕ್ಷುವಿಗೆ ತಾನು ಪರಮಾತ್ಮನಿಗೆ ಶೇಷನೆಂಬ ಭಾವವನ್ನು ಅರಿತಾಗ ಅವನು ಮಾಡುವ ಕರ್ಮಗಳೆಲ್ಲವೂ ಫಲಾಭಿಸಂಧಿಯಿಲ್ಲದವುಗಳಾಗಿ, ನಿಸ್ವಾರ್ಥವಾಗಿ ಪರಾರ್ಥಗಳಾಗುವುವು ಸರ್ವಾಂತರ್ಯಾಮಿಯಾದ ಪರಮಾತ್ಮನಿಗೆ ಸರ್ವಭೂತಗಳೂ ಶರೀರವೆಂಬ ಭಾವನೆಯಿಂದ ಆ ಮುಮುಕ್ಷುವಾದವನು ಸರ್ವಭೂತಗಳಲ್ಲಿಯೂ ಪರಮಾತ್ಮನ ಅಸ್ತಿತ್ವವನ್ನು ಅರಿತವನಾದ್ದರಿಂದ ಇವನು ಇತರರಿಗಾಗಿ ಮಾಡುವ ಕಾರ್ಯಗಳೆಲ್ಲವೂ ಆ ಜೀವ ಶರೀರಿಯಾದ ಪರಮಾತ್ಮನ ಸೇವೆಯೇ ಆಗುವುವು ಇದನ್ನೇ ಭಗವತ್ಕೈಂಕರ್ಯವೆಂದು ಹೇಳುವರು ಇದು ಭಗವದನುಗ್ರಹಕ್ಕೂ ಮುಕ್ತಿಗೂ ಕಾರಣವಾಗುವುದು

**ನಿಗಮನ :**—ಸಂಗ್ರಹವಾಗಿ ಮೇಲೆ ವಿವರಿಸಿದ ವಿಷಯಗಳು ಈ ರೀತಿಯಾಗಿದ್ದು ತತ್ವಜ್ಞಾನ ಮತ್ತು ಪುರುಷಾರ್ಥ ಸಾಧನೆಗಳಿಗೆ ಸಹಕರಿಸುತ್ತವೆ . —

**1. ಜ್ಞಾನ** — ಈ ದೃಶ್ಯ ಪ್ರಪಂಚವೆಲ್ಲವೂ ಪರಮಾತ್ಮನ ಸ್ಥೂಲರೂಪವಾದ ಶರೀರವು ಎಂದರೆ — ಅಚಿತ್ತು ಸ್ಥೂಲರೂಪದಿಂದಿದ್ದು ಇಂದ್ರಿಯಗಳಿಗೆ ಗೋಚರಿಸುವಂತಿರುವುದು. ಜೀವಾತ್ಮರು ಶರೀರದಲ್ಲಿದ್ದು ತಾವು ಆಚರಿಸುವ ವಿವಿಧವಾದ ವ್ಯವಹಾರಗಳಿಂದ ತಿಳಿದುಬರುವರು ಸ್ಥೂಲರೂಪವಾಗಿದ್ದು ನಾಮರೂಪಗಳಿಂದ ಕೂಡಿರುವ ಪ್ರಕೃತಿ ಮತ್ತು ಜೀವಾತ್ಮರುಗಳನ್ನು ಶರೀರವಾಗಿ ಹೊಂದಿ ತದಂತರ್ಯಾಮಿ

ಯಾಗಿರುವುದೇ ಕಾರ್ಯಬ್ರಹ್ಮವು ಅದೇ ಸೃಷ್ಟಿಯೆಂದೂ ಕರೆಯಲ್ಪಡುವುದು ಈ ಚಿದಚಿತ್ತುಗಳು ಸೂಕ್ಷ್ಮರೂಪವನ್ನು ಹೊಂದಿ ನಾಮರೂಪಗಳಿಗೆ ಅನರ್ಹವಾಗಿರುವ ಸ್ಥಿತಿಯೇ ಸೃಷ್ಟಿಗೆ ಮೊದಲು ಇದ್ದ ಪ್ರಳಯ ಸ್ಥಿತಿ ಅದೇ ಕಾರಣ ಸ್ಥಿತಿ, ಈ ಸೂಕ್ಷ್ಮ ಚಿದಚಿತ್ತುಗಳನ್ನು ಶರೀರವಾಗಿ ಹೊಂದಿರುವ ಪರಮಾತ್ಮನೇ ಕಾರ್ಯಸ್ಥಿತಿಗೆ ಮೊದಲು ಇದ್ದ ಕಾರಣ ಬ್ರಹ್ಮವು, “ ಸೃಷ್ಟಿಗೆ ಮೊದಲು ಸತ್ ಎಂಬುವುದೊಂದೇ ಇದ್ದಿತು ” “ ಸದೇವಸೋಮ್ಯೇದಮಗ್ರ ಆಸೀತ್ ” ಎಂಬ ಶ್ರುತಿವಾಕ್ಯದಲ್ಲಿ ‘ ಸತ್ ’ ಎಂಬ ಪದವು ಮೇಲೆ ಹೇಳಿದ ಕಾರಣ ಬ್ರಹ್ಮವನ್ನು ಹೇಳುತ್ತದೆ ಇದರಿಂದ ಕಾರ್ಯ ಕಾರಣಗಳೆರಡೂ ಒಂದೇ ದ್ರವ್ಯವೆಂಬುವುದು ವೇದ್ಯವಾಗುವುದು, ಪರಮಾತ್ಮನಿಗೂ ಚಿದಚಿತ್ತುಗಳಿಗೂ ಇರುವ ಶರೀರಿ ಶರೀರ ಸಂಬಂಧದಿಂದಲೇ ಈ ಸಿದ್ಧಾಂತವು ಸ್ಥಾಪಿತವಾಗುವುದು,

“ ತತ್ವಮಸಿ ” ಎಂಬ ಶ್ರುತಿವಾಕ್ಯದಲ್ಲಿ ‘ ತತ್ ’ ಎಂಬ ಪದವು ಮೇಲೆ ಹೇಳಿದ ಕಾರಣ ಬ್ರಹ್ಮವನ್ನೂ ‘ ತ್ವಂ ’ ಎಂಬ ಪದವು ಶ್ವೇತಕೇತುವನ್ನು ಶರೀರವಾಗಿ ಹೊಂದಿ ತದಂತರ್ಯಾಮಿಯಾಗಿರುವ ಕಾರ್ಯಬ್ರಹ್ಮವನ್ನೂ ನಿರ್ದೇಶಿಸಿ ಕಾರ್ಯಕಾರಣಗಳ ಐಕ್ಯತೆಯನ್ನೂ ಅವೆರಡೂ ಏಕದ್ರವ್ಯವೆಂಬುವನ್ನೂ ಹೇಳುತ್ತದೆ ಇದೇ ತತ್ತ್ವ ಜ್ಞಾನವು

**2. ಪುರುಷಾರ್ಥ ಸಾಧನ :**— ಈ ಶರೀರಿ ಶರೀರ ಪದಗಳ ಸಂಬಂಧಾರ್ಥವನ್ನು ತಿಳಿದು ಅದರಂತೆ ಅನುಷ್ಠಾನವನ್ನು ಕೈಕೊಳ್ಳುವುದರಿಂದ ಪುರುಷಾರ್ಥವಾದ ಮೋಕ್ಷಕ್ಕೆ ಸಹಾಯವಾಗುವುದು ಈ ಅರ್ಥ ವಿಶೇಷವೇನೆಂದರೆ–ಜೀವನು ಪರಮಾತ್ಮನಿಗೆ ನಿಯತ ನಿಯಾಮ್ಯನು, ನಿಯತಾಧಾರಕನು ಮತ್ತು ನಿಯತಶೇಷನು

ನಿಯತಧಾರಕನು ಎಂಬುವುದರಿಂದ ಚಿದಚಿದಾತ್ಮಕವಾದ ಸಮಸ್ತ ಪ್ರಪಂಚವೂ ಪರಮಾತ್ಮನಿಂದ ಧರಿಸಲ್ಪಟ್ಟಿರುವುದು ಸಮಸ್ತ ಜೀವರುಗಳೂ ಅವನಿಂದ ಧರಿಸಲ್ಪಟ್ಟಿರುವರು ಅವನು ವಿಭು, ಸರ್ವಾಂತರ್ಯಾಮಿ ಎಲ್ಲವೂ ಅವನೇ ಅವನ ಪ್ರೇರಣೆಯಂತೆಯೇ ಎಲ್ಲವೂ ನಡೆಯುವುದು ಪ್ರಪಂಚದಲ್ಲಿರುವ ಜೀವರುಗಳೆಲ್ಲರೂ ಸೃಷ್ಟಿಯೆಂಬ ( ಪ್ರಪಂಚವೆಂಬ ) ಒಂದು ದೊಡ್ಡ ಯಂತ್ರದ ಸಣ್ಣ ಮತ್ತು ದೊಡ್ಡ ಭಾಗಗಳು ಒಬ್ಬನಿಗೂ ತನ್ನ ಸ್ವಂತವಾದುದೆಂಬುವುದೊಂದೂ ಇಲ್ಲ, ಎಂದರೆ ಅವನು ಅಕಿಂಚನನು ಎಲ್ಲವೂ ಪರಮಾತ್ಮನ ಸ್ವತ್ತು ತನ್ನ ಉಜ್ಜೀವನಕ್ಕೆ ಆ ಪರಮಾತ್ಮನೊಬ್ಬನೇ ಗತಿ, ಎಂದರೆ ತಾನು ಅನನ್ಯಗತಿಕನು ಇತ್ಯಾದಿ ಭಾವಗಳು ಏರ್ಪಡುವುವು

ನಿಯತ ನಿಯಾಮ್ಯನು – ಎಂಬುವುದರಿಂದ ಎಲ್ಲರೂ ಭಗವಂತನ ನಿಯಮನಕ್ಕೆ ಒಳಪಟ್ಟವರು. ನಾವೆಲ್ಲರೂ ಆ ಪರಮಾತ್ಮನ ಕೈಗೊಂಬೆಗಳಂತಿದ್ದು ಅವನು ಆಡಿಸಿದಂತೆ ಆಡುವೆವು. ಆ ಪರಮಾತ್ಮನು ಅನುಗ್ರಹಿಸಿರುವ ವೇದ, ಶಾಸ್ತ್ರಗಳ ವರ್ಣಾಶ್ರಮಾದಿ ಧರ್ಮ ನಿಯಮಗಳು, ನ್ಯಾಯ ನಡತೆಗಳು ಇವುಗಳನ್ನು ತಪ್ಪದೆ ಅನುಸರಿಸಿ ಅವುಗಳಲ್ಲಿ ಹೇಳಿರುವಂತೆ ನಡೆದುಕೊಳ್ಳಬೇಕು. ಶಾಸ್ತ್ರ ನಿಷಿದ್ಧವಾದ ಕ್ರಿಯೆಗಳಿಂದ ದೂರವಿರಬೇಕು.

ನಿಯತ ಶೇಷತ್ವ – ಎಂಬುವುದರಿಂದ ನಾವು ಮಾಡುವ ಸಮಸ್ತ ಕಾರ್ಯಗಳನ್ನೂ ಭಗವತ್ಕೈಂಕರ್ಯವೆಂಬ ಭಾವದಿಂದ ಮಾಡಬೇಕು. ಕರ್ಮಗಳು ನಿಸ್ವಾರ್ಥವಾಗಿದ್ದು ಪರಿಶುದ್ಧವಾಗಿರಬೇಕು. ಭಗವಂತನಲ್ಲಿ ಭರಸಮರ್ಪಣೆಯನ್ನು ಮಾಡಿ ಅವನಲ್ಲಿ ಶರಣಾಗತಿಯನ್ನು ಅನುಸಂಧಿಸಬೇಕು. ಇವೇ ಮುಂತಾದ ವಿಷಯಗಳು ಸ್ಪಷ್ಟವಾಗುವುವು.